ಸಂಪುಟ : 8 ಸಂಚಿಕೆ : 236 ಪುಟ : 4 ಬೆಲೆ : 3.00 ಗುರುವಾರ ಅಕ್ಟೋಬರ್ 26, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 236 Pages : 4 Price : 3.00 Thursday October 26, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ‘ಕರ್ನಾಟಕ ನಾಮಕರಣಕ್ಕೆ 50ರ ಸಂಭ್ರಮ’ ಕಾರ್ಯಕ್ರಮದ ಕುರಿತು ಸಚಿವ ಎಚ್.ಕೆ ಪಾಟೀಲ ಮಾಹಿತಿ

# ‘ಸುವರ್ಣ ಸಂಭ್ರಮ’ಕ್ಕೆ ಸಕಲ ಸಿದ್ಧತೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಮೈಸೂರು ರಾಜ್ಯಕ್ಕೆ ‘ಕರ್ನಾಟಕ’ ಎಂದು ನಾಮಕರಣವಾಗಿ 50 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ‘ಸುವರ್ಣ ಸಂಭ್ರಮ’ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದ್ದು, ಜಿಲ್ಲೆಯಲ್ಲಿ ಸುವರ್ಣ ಸಂಭ್ರಮದ ಕಾರ್ಯಕ್ರಮವನ್ನು ನವೆಂಬರ್ 3.ರಂದು ಅಭೂತಪೂರ್ವವಾಗಿ ಆಯೋಜಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ನುಡಿದರು.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ಸಂಜೆ ಜರುಗಿದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕರ್ನಾಟಕ ನಾಮಕರಣಕ್ಕೆ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಕರ್ನಾಟಕ ಸಂಭ್ರಮ-50 ಆಚರಿಸಲಾಗುತ್ತಿದೆ. 50 ವರ್ಷಗಳ ಹಿಂದೆ ಗದಗ ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಜರುಗಿದ ಐತಿಹಾಸಿಕ ಸಮಾವೇಶವನ್ನು ಮೆಲುಕು ಹಾಕುವದರೊಂದಿಗೆ ಸ್ವರ್ಣ ಮಹೋತ್ಸವ ಆಚರಣೆ ಮರುಕಳಿಸುವಂತೆ ಕರ್ನಾಟಕ ಸಂಭ್ರಮ-50 ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದರು.

ಜಿಲ್ಲೆಯಲ್ಲಿ ನ.3ರಂದು ಜರುಗಲಿರುವ ಕಾರ್ಯಕ್ರಮಕ್ಕೆ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆಗಮಿಸಲಿದ್ದಾರೆ. ಹಂಪಿಯಿಂದ ಗೋಲ್ಡನ್ ಚಾರಿಯೆಟ್ ರೈಲಿನ ಮೂಲಕ ಮುಖ್ಯಮಂತ್ರಿಗಳು ಗದುಗಿಗೆ ಆಗಮಿಸಿ ವೀರನಾರಾಯಣ ದೇವಸ್ಥಾನದಲ್ಲಿ ಕರ್ನಾಟಕ ಜ್ಯೋತಿಯನ್ನು ಸ್ವಾಗತಿಸುವರು. ನಂತರ ಭುವನೇಶ್ವರಿ ಪ್ರತಿಮೆಗೆ ಪುಷ್ಪಾರ್ಚನೆ ನೆರವೇರಿಸುವ ಮೂಲಕ ಕಲಾ ತಂಡ ಹಾಗೂ ರೂಪಕಗಳಿಗೆ ಚಾಲನೆ ನೀಡುವರು.

ವೀರನಾರಾಯಣ ದೇವಸ್ಥಾನದಿಂದ ಹೊರಡುವ ಮೆರವಣಿಗೆಯಲ್ಲಿ ರಾಜ್ಯ ಹಾಗೂ ಸ್ಥಳೀಯ ಕಲಾ ತಂಡಗಳು ಪಾಲ್ಗೊಳ್ಳಲಿದ್ದು, ಮುಖ್ಯಮಂತ್ರಿಗಳನ್ನು ಭವ್ಯ ಮೆರವಣಿಗೆ ಮೂಲಕ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಜರುಗುವ ಕಾರ್ಯಕ್ರಮ ವೇದಿಕೆಗೆ ಕರೆತರಲಾಗುವುದು. ನಂತರ ವೇದಿಕೆ ಕಾರ್ಯಕ್ರಮ ಅದ್ಧೂರಿಯಾಗಿ ಏರ್ಪಡಿಸಲು ಸಿದ್ಧತೆ ನಡೆಸಲಾಗುತ್ತಿದೆ ಎಂದರು. ಸಮಾರಂಭದ ಸ್ಥಳದಲ್ಲಿ 50 ವರ್ಷ ಹಳೆಯ ಅಪರೂಪದ ಛಾಯಾಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗುತ್ತಿದ್ದು, ಸಾರ್ವಜನಿಕರು, ಯುವ ಜನತೆ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಇದಕ್ಕೂ ಮುನ್ನ ಸಚಿವ ಎಚ್.ಕೆ ಪಾಟೀಲ 50 ವರ್ಷಗಳ ಹಿಂದೆ ಕರ್ನಾಟಕ ನಾಮಕರಣಕ್ಕೆ ಗದುಗಿನ ಮಹನೀಯರ ಪಾತ್ರದ ಕುರಿತ ಇತಿಹಾಸವನ್ನು ಮೆಲಕು ಹಾಕಿದರು. ಕರ್ನಾಟಕ ಸಂಭ್ರಮ-50ರ ಗದಗ ಕಾರ್ಯಕ್ರಮದ ಪ್ರಚಾರದ ಬ್ಯಾನರ್, ಪೋಸ್ಟರ್‌ಗಳನ್ನು ಅನಾವರಣಗೊಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ವಿಭೂತಿ, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶರಣು ಗೋಗೇರಿ, ವಾರ್ತಾಧಿಕಾರಿ ವಸಂತ ಮಡ್ಲೂರ ಉಪಸ್ಥಿತರಿದ್ದರು.



> ನವೆಂಬರ್ 1ರಂದು ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಕೆ.ಹೆಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ. ಅಂದು ಸಂಜೆ ಸಾಂಸ್ಕೃತಿ ಕಾರ್ಯಕ್ರಮಗಳನ್ನು ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿನ ಬೃಹತ್ ವೇದಿಕೆಯಲ್ಲಿ ಆಯೋಜಿಸಲಾಗುತ್ತಿದೆ. ನವೆಂಬರ್ 2 ಹಾಗೂ 3ರಂದು ಸಾಯಂಕಾಲ ರಾಜ್ಯ ಹಾಗೂ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.
>
> **- ಎಚ್.ಕೆ ಪಾಟೀಲ.**
> ಜಿಲ್ಲಾ ಉಸ್ತುವಾರಿ ಸಚಿವರು.

> ನ.3ರ ಐತಿಹಾಸಿಕ ದಿನದಂದು 450 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯದ ಆವರಣದಲ್ಲಿ ಶಾಲಾ ಕಟ್ಟಡ ಉದ್ಘಾಟನೆಯನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಉದ್ಘಾಟಿಸುವರು ಎಂದು ಸಚಿವ ಎಚ್.ಕೆ ಪಾಟೀಲ ಮಾಹಿತಿ ನೀಡಿದರು.

### ಲಿಂ. ತೋಂಟದ ಸಿದ್ಧಲಿಂಗ ಶ್ರೀಗಳ 5ನೆ ಪುಣ್ಯಸ್ಮರಣೆಯಲ್ಲಿ ಸಚಿವ ಎಚ್.ಕೆ ಪಾಟೀಲ

## ಶ್ರೀಗಳ ಮಾತು ಕಠೋರವಾದರೂ ಮನಸ್ಸು ಹೂವಾಗಿತ್ತು



> ಲಿಂ. ತೋಂಟದ ಸಿದ್ಧಲಿಂಗ ಶ್ರೀಗಳ ಮಾತು ಕಠೋರವೆನಿಸಿದರೂ, ಮನಸ್ಸು ಹೂವಿನಂತಿತ್ತು. ಸಮಾಜದ ಆಗುಹೋಗುಗಳಿಗೆ ಸ್ಪಂದಿಸುತ್ತಿದ್ದರು. ಸರಕಾರದ ನಿಲುವುಗಳೊಂದಿಗೂ ಹೋರಾಡುತ್ತಿದ್ದರು. ಕನ್ನಡದ ಉಳಿವಿಗಾಗಿ ಗೋಕಾಕ್ ಚಳುವಳಿಯನ್ನೂ ಕೈಗೊಂಡರು.
>
> **- ಎಚ್.ಕೆ ಪಾಟೀಲ.**
> ಗದಗ ಉಸ್ತುವಾರಿ ಸಚಿವರು.

**■ವಿಜಯಸಾಕ್ಷಿ ಸುದ್ದಿ, ಗದಗ**

ಶರಣರ ವಚನಗಳು, ಆಶಯಗಳು ಸಮಾಜದಲ್ಲಿ ಆಚರಣೆಗೆ ಬರಬೇಕು, ಬಸವತತ್ವ ಪ್ರಸಾರವಾಗಬೇಕು ಎನ್ನುವ ಕನಸುಗಳನ್ನು ಲಿಂ. ತೋಂಟದ ಸಿದ್ಧಲಿಂಗ ಶ್ರೀಗಳು ಹೊಂದಿದ್ದರು ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ ಪಾಟೀಲ ಹೇಳಿದರು.

ಇಲ್ಲಿನ ತೋಂಟದಾರ್ಯ ಮಠದ ಆವರಣದಲ್ಲಿರುವ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಶಿವಾನುಭವ ಮಂಟಪದಲ್ಲಿ ಬುಧವಾರ ನಡೆದ ಲಿಂ. ತೋಂಟದ ಸಿದ್ಧಲಿಂಗ ಶ್ರೀಗಳ 5ನೆ ಪುಣ್ಯಸ್ಮರಣೆ, ಮರಣವೇ ಮಹಾನವಮಿ ಆಚರಣೆ, ಗ್ರಂಥಗಳ ಬಿಡುಗಡೆ ಹಾಗೂ ಡಾ. ತೋಂಟದ ಸಿದ್ಧಲಿಂಗ ಶ್ರೀಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ ಮಾತನಾಡಿ, ಸಂಪ್ರದಾಯವಾದಿಗಳು ಲಿಂ. ಸಿದ್ಧಲಿಂಗ ಶ್ರೀಗಳ ಮೇಲೆ ಕಲ್ಲು ತೂರಿದರು. ಆದರೂ ಅವರು ಪಟ್ಟುಬಿಡದೆ, ಬಸವಣ್ಣನ ಹಾದಿಯಲ್ಲಿ ಸಾಗಿ, ಲಿಂಗಾಯತ ಧರ್ಮವನ್ನು ಬೆಳಗಿದರು. ಅನೇಕ ಮಠಾಧೀಶರು ಲಿಂಗಾಯತ ಧರ್ಮವನ್ನು ನಿರ್ಲಕ್ಷಿಸುತ್ತಿರುವ ಸಂದರ್ಭದಲ್ಲಿ ತೋಂಟದ ಸಿದ್ಧಲಿಂಗ ಶ್ರೀಗಳು, ಇಳಕಲ್ ಮಹಾಂತ ಸ್ವಾಮಿಗಳು ಅದಕ್ಕೆ ಅಪವಾದವಾಗಿ ಲಿಂಗಾಯತ ಧರ್ಮದ ರಕ್ಷಣೆಗೆ ಮುಂದಾದರು ಎಂದರು.

‘ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ’ ಸ್ವೀಕರಿಸಿ ▶▶3 ನೇ ಪುಟಕ್ಕೆ

### ಲಿಂಗಪೂಜೆಯ ಪೂರ್ವಭಾವಿ ಸಭೆಯಲ್ಲಿ ಬಸವಜಯ ಮೃತ್ಯುಂಜಯ ಸ್ವಾಮೀಜಿ

## ಮೀಸಲಾತಿ ಪಡೆಯುವವರೆಗೂ ಹೋರಾಟ ನಿಲ್ಲದು

**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**



ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ಆರಂಭಿಸಿರುವ ಹೋರಾಟವು ಮೀಸಲಾತಿಯನ್ನು ಪಡೆಯುವರೆಗೂ ನಿಲ್ಲಿಸುವದಿಲ್ಲ ಎಂದು ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಪಟ್ಟಣದ ಜಿ.ಕೆ ಬಂಡಿ ಗಾರ್ಡ್‌ನಲ್ಲಿ ಬುಧವಾರ ನಡೆದ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗಾಗಿ ಆಗ್ರಹಿಸಿ ಜಿಲ್ಲೆಯ ಅಸುಂಡಿ ಕ್ರಾಸ್‌ನಲ್ಲಿ ಅ.30ರಂದು ನಡೆಯಲಿರುವ ಲಿಂಗಪೂಜೆಯ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಶ್ರೀಗಳು ಮಾತನಾಡಿದರು.


ಕಾಂಗ್ರೆಸ್ ಸರ್ಕಾರ, ಬಿಜೆಪಿ ಸರ್ಕಾರವಿರಲಿ ಅಥವಾ ನಮ್ಮ ಸಮುದಾಯವರೇ ಸಿಎಂ ಆದರೂ ಸಹ ನ್ಯಾಯ ಸಮ್ಮತವಾಗಿರುವ ಬೇಡಿಕೆಯಿಂದ ನಾವು ಹಿಂದೆ ಸರಿಯುವದಿಲ್ಲ.

ಹೀಗಾಗಿ ಸಿದ್ದರಾಮಯ್ಯ ಅವರು ಸಿಎಂ ಆಗಿ ಅಧಿಕಾರ ಸ್ವೀಕರಿಸಿದ ಬಳಿಕ ಭೇಟಿಯಾಗಿ ಮೀಸಲಾತಿ ಕುರಿತು ಮಾತನಾಡಿದಾಗ, ಬಜೆಟ್ ಅಧಿವೇಶನದವರೆಗೆ ಸಮಯ ನೀಡಿ ಎಂದಿದ್ದರು. ಆದರೆ ಬಜೆಟ್ ಅಧಿವೇಶನ ಮುಗಿದು 4 ತಿಂಗಳು ಗತಿಸಿದ್ದರೂ ಸಹ ಸಿಎಂ ಅವರು ನಮ್ಮ ಬೇಡಿಕೆಯತ್ತ ಗಮನ ಹರಿಸುತ್ತಿಲ್ಲ. ಅವರಿಗೆ ಮತ್ತೆ ಭೇಟಿಯಾದರೆ ದೀಪಾವಳಿ, ಸಂಕ್ರಾಂತಿ ಇಲ್ಲವೇ ಲೋಕಸಭಾ ಚುನಾವಣೆ ಮುಗಿಯಲಿ ಎನ್ನಬಹುದು. ಲೋಕಸಭಾ ಚುನಾವಣೆ ಗೆಲ್ಲಬೇಕು ಎಂದು ಎರಡೂ ರಾಷ್ಟ್ರೀಯ ಪಕ್ಷಗಳಿಗೆ ಹಠವಿದೆ.

ಹೀಗಾಗಿ ಲೋಕಸಭಾ ಚುನಾವಣೆ ಒಳಗೆ ನ್ಯಾಯ ಸಮ್ಮತವಾದ 2ಎ ಮೀಸಲಾತಿಯನ್ನು ಪಂಚಮಸಾಲಿ ಸಮಾಜಕ್ಕೆ ನೀಡಲು ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸೋಣ ಎಂದರು. ▶▶3ನೇ ಪುಟಕ್ಕೆ

## ಅ. 28ರಂದು ಮಹರ್ಷಿ ವಾಲ್ಮೀಕಿ ಜಯಂತಿ

**■ವಿಜಯಸಾಕ್ಷಿ ಸುದ್ದಿ, ಗದಗ**



ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಗದಗ ಬೆಟಗೇರಿ ನಗರಸಭೆ ಹಾಗೂ ಮಹರ್ಷಿ ವಾಲ್ಮೀಕಿ ಸಂಘ ಇವರ ಸಹಯೋಗದಲ್ಲಿ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಅಕ್ಟೋಬರ್ 28 ರಂದು ಶನಿವಾರ ಮುಂಜಾನೆ 10:30 ಗಂಟೆಗೆ ನಗರದ ಜಿಲ್ಲಾಡಳತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಬಿ.ನಾಗೇಂದ್ರ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸರ್ಕಾರದ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ಶಾಸಕರುಗಳಾದ ಸಿ.ಸಿ.ಪಾಟೀಲ, ಜಿ.ಎಸ್.ಪಾಟೀಲ, ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ, ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ ಆಗಮಿಸುವರು.

ನಿವೃತ್ತ ನ್ಯಾಯಾಧೀಶ ಡಿ.ವಾಯ್. ಬಸಾಪೂರ ಮಹರ್ಷಿ ವಾಲ್ಮೀಕಿ ಜೀವನ ಕುರಿತು ಉಪನ್ಯಾಸ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಸಾಧಕರಿಗೆ ಸನ್ಮಾನ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ವಿತರಿಸಲಾಗುವದು.

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಪ್ರಶಾಂತ ವರಗಪ್ಪನವರ ಸರ್ವರಿಗೂ ಆದರದ ಸ್ವಾಗತ ಕೋರಿದ್ದಾರೆ.

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 26 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 26 ಕೃಷ್ಣ ಟಾಕೀಸ್ ಲೈನ್, ಕಲಾಮಂದಿರ ರೋಡ್, ಅಕ್ಕನ ಬಳಗ ಗೋಡಚಿ ಖಾನಾವಳಿ ಲೈನ್, ಜೆಟಿ ಮಠದ ರೋಡ್, ಅಂಗಡಿಯವರ ಲೈನ್, ದವಳೇಯವರ ಲೈನ್, ಪ್ರೆಸ್ಟೀಜ್ ಬಾರ್ ಲೈನ್, ಕಲಾ ಮಂದಿರ ಲೈನ್, ಮಾಳೆಕೊಪ್ಪದ ಮಠ ಸಂಧಿ, ಬಂಗಾರಶೆಟ್ಟರ್ ಲೈನ್,

ವಾರ್ಡ್ ನಂ. 21, 23 ಗುಳಗುಂದಿಯವರ ಲೈನ್, ಭೂಮಾರವರ ಲೈನ್, ರಾಮದಾಸ ಲೈನ್, ಮೆಹರವಾಡೆ ಲೈನ್, ಚೆನ್ನಪ್ಪನವರ ಲೈನ್, ಎಲಿಗಾರ ಪ್ಲಾಟ್, ಮುಲ್ಲಾನಿ ಡಾಕ್ಟರ್ ಲೈನ್, ಕರಬಿಷ್ಟಿಯವರ ಲೈನ್, ಮಸೂತಿ ಲೈನ್, ಲಕ್ಷ್ಮೇಶ್ವರ ಲೈನ್, ಮುನವಳ್ಳಿಯವರ ಪ್ಲಾಟ್, ಅಕ್ಕಿಯವರ ಪ್ಲಾಟ್, ಕಮತರ ಪ್ಲಾಟ್, ಜಕ್ಕಲಿಯವರ ಲೈನ್, ಕೌರಬಟ್ಟಿಯವರ ಲೈನ್.

ವಾರ್ಡ್ ನಂ. 27,28 ಕುರುಡಗಿ ದವಾಖಾನೆ ಲೈನ್, ಸಜ್ಜನ ಕುಲಕರ್ಣಿ ಲೈನ್, ನಂದೀಶ್ವರ್ ಮಠದ ಹಿಂದಿನ ಭಾಗ- ತಮ್ರಲಿ ಮಠದ ಲೈನ್, ಕೊಪ್ಪದರ ಲೈನ್, ಜಿ ಎಸ್ ಪಾಟೀಲರ ಲೈನ್, ನಾಗರಕಟ್ಟಿ ಲೈನ್, ರೊಟ್ಟಿ ಲೇಔಟ್, ಹೊಸಮನಿ ಸರ್ ಲೈನ್, ಸ್ಟೇಡಿಯಂ ಲೈನ್ ಕೆಲವು ಉಳಿದ ಭಾಗಗಳು,

ವಾರ್ಡ್ ನಂ.7 ಪೆಂಡಾರ ಓಣಿ, ಮಲ್ಲೇಶಪ್ಪನವರ ಲೈನ್, ನಂದರಗಿಯವರ ಲೈನ್, ಕೋಣಿ ಅವರ ಲೈನ್, ಬಚ್ಚಲಕ್ಕಮ್ಮನ ಗುಡಿ ಲೈನ್, ಚೆನ್ನಗೌಡ್ರ ಓಣಿ, ಹುಚ್ಚನಗೌಡ್ರು ಓಣಿ. ವಾರ್ಡ್ ನಂ. 5,6 ಕೆಲವು ಭಾಗಗಳು.

ವಾರ್ಡ್ ನಂ 29 ಮಸೂತಿ ಮೇಲಿನ ಭಾಗ ಕೆಳಗಿನ ಭಾಗಗಳು.

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಾಲು ಜಾರಿ ಕೆರೆ ನೀರಲ್ಲಿ ಮುಳುಗಿ ಬಾಲಕಿ ಸಾವು

**■ವಿಜಯಸಾಕ್ಷಿ ಸುದ್ದಿ, ಗದಗ**



ಕುಡಿಯುವ ನೀರು ತುಂಬಲು ಕೆರೆಗೆ ಹೋಗಿದ್ದ ಬಾಲಕಿ ಕಾಲು ಜಾರಿ ನೀರಲ್ಲಿ ಮುಳುಗಿ ಸಾವನ್ನಪ್ಪಿದ ದುರ್ಘಟನೆ ಬುಧವಾರ ಬೆಳಿಗ್ಗೆ ಜರುಗಿದೆ.

ಗದಗ ತಾಲೂಕಿನ ಬಳಗಾನೂರ ಗ್ರಾಮದಲ್ಲಿ ಇಂದು ಮುಂಜಾನೆ ಕುಡಿಯುವ ನೀರು ತುಂಬಲು ಕೆರೆಗೆ ಹೋಗಿದ್ದ ಗ್ರಾಮದ ಭುವನೇಶ್ವರಿ ಚಟ್ರಿ (13) ವರ್ಷದ ಬಾಲಕಿ ಕಾಲು ಜಾರಿ ನೀರಲ್ಲಿ ಬಿದ್ದಿದ್ದಾಳೆ.

ಸುದ್ದಿ ತಿಳಿದ ಕುಟುಂಬಸ್ಥರು ಹಾಗೂ ಗ್ರಾಮಸ್ಥರು ಸ್ಥಳಕ್ಕೆ ಆಗಮಿಸಿ ಬಾಲಕಿಯ ಶವ ಮೇಲೆತ್ತಿ ಹೊರ ತೆಗೆದಿದ್ದಾರೆ.

ಈ ದುರ್ಘಟನೆಗೆ ಗ್ರಾಮ ಪಂಚಾಯತಿ ಆಡಳಿತ ಮಂಡಳಿಯೇ ಕಾರಣವೆಂದು ರೊಚ್ಚಿಗೆದ್ದ ಕುಟುಂಬಸ್ಥರು ಹಾಗೂ ಗ್ರಾಮಸ್ಥರು ಗ್ರಾಮ ಪಂಚಾಯತ್‌ಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಪಂಚಾಯತಿಯ ಮುಂದೆ ಬಾಲಕಿ ಶವ ಇಟ್ಟು ಪ್ರತಿಭಟನೆ ನಡೆಸಿದ ಗ್ರಾಮಸ್ಥರು, ಕೆರೆಗೆ ತಂತಿ ಬೇಲಿ ಮತ್ತು ಮೆಟ್ಟಿಲುಗಳನ್ನು ನಿರ್ಮಿಸುವಂತೆ ಹಲವು ಭಾರಿ ಒತ್ತಾಯ ಮಾಡಿದ್ದರು, ಗ್ರಾಮ ಪಂಚಾಯತ್ ಆಡಳಿತ ಮಂಡಳಿಯು ನಿರ್ಲಕ್ಷ್ಯ ತೋರಿದೆ ಆಕ್ರೋಶ ವ್ಯಕ್ತಪಡಿಸಿದರು. ಇತ್ತ ಬಾಲಕಿಯನ್ನು ಕಳೆದುಕೊಂಡ ಕುಟುಂಬಸ್ಥರ ಆಕ್ರಂಧನ ಮುಗಿಲು ಮುಟ್ಟಿದೆ.

ಇಡೀ ಗ್ರಾಮದ ಜನರು ಕುಡಿಯಲು ಇದೇ ಕೆರೆ ನೀರನ್ನು ಬಳಕೆ ಮಾಡುತ್ತಿದ್ದಾರೆ. ಹೀಗಾಗಿ ನಿತ್ಯವೂ ನೂರಾರು ಜನರು ನೀರು ತರಲು ಕೆರೆ ಬರುತ್ತಾರೆ. ಇದರಿಂದಾಗಿ ಈ ಅವಘಡ ಸಂಭವಿಸಿದೆ.

ಗದಗ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದಾರೆ.

# ಹಿರೇಬಣದ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಬನ್ನಿ ಪೂಜೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪುರಾತನ ಇತಿಹಾಸವನ್ನು ಹೊಂದಿದ ಅನೇಕ ದೇವಸ್ಥಾನಗಳಲ್ಲಿ ಹಿರೇಬಣದಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನವು ಒಂದಾಗಿದ್ದು, ಸುಮಾರು 250 ವರ್ಷಗಳಿಗೂ ಹಳೆಯದಾದ ದೇವಸ್ಥಾನವಾಗಿದೆ. ಶರನ್ನವರಾತ್ರಿ ಅಂಗವಾಗಿ ಇಲ್ಲಿ ವಿಶೇಷ ಪೂಜೆ ಪುನಸ್ಕಾರಗಳು, ಪುರಾಣ ಪ್ರವಚನಗಳನ್ನು ಸಂಪ್ರದಾಯದಂತೆ ನೆರವೇರಿಸಲಾಯಿತು.

ಸೋಮವಾರ ಮುಂಜಾನೆ ವೆಂಕಟೇಶ್ವರ ದೇವಸ್ಥಾನದ ರಥೋತ್ಸವ ನೂರಾರು ಭಕ್ತರ ಸಮ್ಮುಖದಲ್ಲಿ ವೈಭವದಿಂದ ಜರುಗಿತು. ನಂತರ ಸಂಜೆ ಸಮೀಪದದಲ್ಲಿರುವ ಲಕ್ಷ್ಮಣಲಿಂಗ ದೇವಸ್ಥಾನದ ಹತ್ತಿರ ಬನ್ನಿ ಮುಡಿಯುವ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ತಲೆ ತಲಾಂತರದಿಂದ ಈ ದೇವಸ್ಥಾನದ ಶರನ್ನವರಾತ್ರಿ ಪೂಜೆಯಲ್ಲಿ ಹುಲಗೇರಿಬಣದಲ್ಲಿರುವ ಪಾಟೀಲಕುಲಕರ್ಣಿಯುವರ ಮನೆತನದ ನಾರಾಯಣ ಪಾಟೀಲಕುಲಕರ್ಣಿಯುವರು ಶಮಿವೃಕ್ಷಕ್ಕೆ ಪೂಜೆ ಸಲ್ಲಿಸಿ ಬನ್ನಿಮುಡಿಯುವ ಕಾರ್ಯಕ್ಕೆ ಸಂಪ್ರದಾಯದಂತೆ ಚಾಲನೆ ನೀಡಿದರು.

ಈ ಶಮಿವೃಕ್ಷಕ್ಕೆ ಪೂಜೆ ಸಲ್ಲಿಸುವ ಸಂದರ್ಭದಲ್ಲಿ ಶ್ರೀ ವೆಂಕಟೇಶ್ವರ ದೇವರ ಹಾಗೂ ಲಕ್ಷ್ಮಣಲಿಂಗ ದೇವರ ಪಲ್ಲಕ್ಕಿಗಳು ಆಗಮಿಸಿ ಎರಡೂ ದೇವರಿಗೂ ಶಮಿವೃಕ್ಷದ ಬಳಿ ಪೂಜೆ ಸಲ್ಲಿಸಿ ನಂತರ ಪ್ರದಕ್ಷಿಣೆ ಹಾಕಿ ನೂರಾರು ವರ್ಷಗಳ ಪುರಾತನವಾದ ಖಡ್ಗದಿಂದ ಬನ್ನಿ ಮುಡಿಯುವ ಕಾರ್ಯವನ್ನು ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ನಾರಾಯಣ ಪಾಟೀಲ ಕುಲಕರ್ಣಿ, ವ್ಹಿ.ಎಲ್ ಪೂಜಾರ, ಗುರುರಾಜ ಪಾಟೀಲಕುಲಕರ್ಣಿ, ಅರ್ಚಕರಾದ ವೆಂಕಟೇಶ ಗುಡಿ, ಶ್ರೀಕಾಂತ ಪೂಜಾರ, ಗೋಪಾಲ ಪಡ್ನಿಸ್, ಪಲ್ಲಣ್ಣ ಕುಲಕರ್ಣಿ, ಆರ್.ಎನ್ ಪಂಚಬಾವಿ, ಕೃಷ್ಣ ಕುಲಕರ್ಣಿ, ಅರವಿಂದ ದೇಶಪಾಂಡೆ, ಶಂಕರ ಬೆಟಗೇರಿ, ರಾಜ ಹುಲಮನಿ, ಅನಂತಭಟ್ ಪೂಜಾರ ಸೇರಿದಂತೆ ಅನೇಕರಿದ್ದರು.



ಲಕ್ಷ್ಮೇಶ್ವರ ನಗರದಲ್ಲಿದಸರಾ ಹಿನ್ನೆಲೆಯಲ್ಲಿ ಪುಲಿಗೆರೆಯ ಆರಾಧ್ಯ ದೈವ ಸೋಮೇಶ್ವರ ದೇವಸ್ಥಾನದಲ್ಲಿ ಸೋಮೇಶ್ವರ ಮೂರ್ತಿಗೆ ವಿಳ್ಯದೆಲೆ ಪೂಜೆ, ವಿಶೇಷ ಆಭರಣಾಲಂಕಾರ ಮಾಡಲಾಗಿತ್ತು. ಸಂಜೆಗದಗರಸ್ತೆಯಲ್ಲಿನ ಸೋಮೇಶ್ವರ ಪಾದಗಟ್ಟಿಯ ಬನ್ನಿಮಹಾಂಕಾಳಿ ಮತ್ತುದೇವಸ್ಥಾನಕ್ಕೆ ಆಗಮಿಸಿದ ಅಪಾರ ಭಕ್ತ ಸಮೂಹ ಬನ್ನಿ ಮುಡಿಯುವಕಾರ್ಯದಲ್ಲಿ ಪಾಲ್ಗೊಂಡರು.

**ದಸರಾ ಧರ್ಮ ಸಮ್ಮೇಳನದಲ್ಲಿ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳ ಶಾಂತಿ ಸಂದೇಶ**


# ವೈರುಧ್ಯ ಮರೆತು, ಒಲವು ಗುಣಿಸುವುದೇ ವಿಜಯದಶಮಿ

■ವಿಜಯಸಾಕ್ಷಿ ಸುದ್ದಿ, ಲಿಂಗಸುಗೂರು

ಮನುಕುಲದ ಬದುಕಿನ ವಿದ್ಯಮಾನಗಳಲ್ಲಿ ಇರಬಹುದಾದ ಎಲ್ಲ ದ್ವಂದ್ವ ವೈರುಧ್ಯಗಳನ್ನು ಮರೆತು ಹದುಳ ಭಾವನೆಗಳ ಸಂಗಮದಲ್ಲಿ ಒಲವು ಗುಣಿಸುವುದೇ ವಿಜಯ ದಶಮಿ ಹಬ್ಬದ ಮೂಲ ಆಶಯವಾಗಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಮಂಗಳವಾರ ಇಲ್ಲಿಯ ಮಾನವ ಧರ್ಮ ಮಂಟಪದಲ್ಲಿ ಹತ್ತು ದಿನಗಳ ಕಾಲ ಜರುಗಿದ 2023ನೇ ವರ್ಷದ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ವಿಜಯ ದಶಮಿಯ ಶಾಂತಿ ಸಂದೇಶ ಅನುಗ್ರಹಿಸಿ ಮಾತನಾಡುತ್ತಿದ್ದರು.

ಜಾತಿ, ವರ್ಣ, ವರ್ಗ ಸಂಘರ್ಷಗಳನ್ನು ಬದಿಗೊತ್ತಿ ಸ್ನೇಹ ಸಿಂಚನದಲ್ಲಿ ಸಹೋದರ ಭಾವತನ್ಮಯತೆಯನ್ನು ಹೊಂದಲು ದಸರಾ ಹಬ್ಬ ಹಿರಿದಾದ ಅವಕಾಶಗಳನ್ನು ಒದಗಿಸುತ್ತದೆ. ಪೈಶಾಚಿಕ ಪ್ರವೃತ್ತಿಗಳಿಂದ ಹೊರಬಂದು ಸಾತ್ವಿಕ ಸತ್ಯ-ಶುದ್ಧತೆಯ ಜೀವನ ವಿಧಾನ ಹೊಂದಲು ಎಲ್ಲರೂ ಸಂಕಲ್ಪಿಸುವ ಅಗತ್ಯವಿದೆ ಎಂದರು.



ಆದಿ ಶಕ್ತಿ ಮಾತೆಯ ಅರ್ಚನೆ ಆರಾಧನೆಗೆ ಮೀಸಲಾದ ನವರಾತ್ರಿಯ ಹಬ್ಬವು ದುಷ್ಟರ ನಿಗ್ರಹ ಮತ್ತು ಶಿಷ್ಟರ ಪರಿಪಾಲನೆಗೆ ಬೆಳಕು ತುಂಬುತ್ತದೆ. ಅವರಿವರೆಂಬ ವಿಂಗಡಣೆಯನ್ನು ತೊರೆದು ಎಲ್ಲರೂ ನಮ್ಮವರೇ ಎಂದು ಒಂದಾಗಿಸುವ ಜೋಡಣೆಯನ್ನು ಹುಟ್ಟುಹಾಕುವ ಹಬ್ಬವೇ ವಿಜಯದಶಮಿ. ಮನುಕುಲದ ವಿನಾಶಕ್ಕೆ ಕಾರಣವಾಗುವ ಎಲ್ಲ ಮಾರಕ ಕೃತ್ಯಗಳನ್ನು ಕೈಬಿಟ್ಟು ಬಾಳನ್ನು ಬಂಗಾರವಾಗಿಸುವ ಶಾಂತಿಪೂರ್ಣ ನಡೆ-ನುಡಿಗಳನ್ನು ಸ್ವೀಕರಿಸಿ ಅನುಷ್ಠಾನಗೊಳಿಸುವ ಪರ್ವ ಕಾಲವೇ ವಿಜಯ ದಶಮಿ. ಕತ್ತರಿ ಗುಣವನ್ನೇ ಕೇಂದ್ರೀಕರಿಸಿರುವ ಜಾತೀಯತೆ-ಯ ಕುಬ್ಜ ಮನಸ್ಥಿತಿಯ ಎಲ್ಲರ ಮನಗಳನ್ನು ಸೂಜಿಯಂತೆ ಕೂಡಿಸುವ ಧರ್ಮ ಪರಿಪಾಲನೆಗೆ ಸರ್ವರ ಭಾವನೆಗಳು ತೆರೆದುಕೊಳ್ಳಬೇಕೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಕರೆ ನೀಡಿದರು.

ದೇವರಭೂಪುರದ ಅಭಿನವ ಗಜದಂಡ ಶಿವಾಚಾರ್ಯ ಸ್ವಾಮಿಗಳು ಪ್ರಾಸ್ತಾವಿಕ ಮಾತನಾಡಿದರು. ಎಡೆಯೂರು ರೇಣುಕ ಶಿವಾಚಾರ್ಯ ಸ್ವಾಮಿಗಳು ಸೇರಿದಂತೆ ಸಿದ್ಧರಬೆಟ್ಟ, ಮಳಲಿ, ಸಂಗೊಳ್ಳಿ, ಸಿಂದನೂರು, ರೌಡಕುಂದ, ಸಿಂದಗಿ, ಉಕ್ಕಡಗಾತ್ರಿ, ಸಂತೆಕಲ್ಲೂರು ಶ್ರೀಗಳು ಅಂತಾಪುರ ತಾತಾ ಹಾಗೂ ಪ್ರಧಾನ ಕಾರ್ಯದರ್ಶಿ, ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪುರ ಸೇರಿದಂತೆ ದಸರಾ ಧರ್ಮ ಸಮ್ಮೇಳನದ ವಿವಿಧ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ದಸರಾ ಮಹೋತ್ಸವ ಸೇವಾ ಸಮಿತಿಯವರು ಶ್ರೀ ರಂಭಾಪುರಿ ಜಗದ್ಗುರುಗಳಿಗೆ ಗೌರವ ಸಮರ್ಪಣೆ ಮಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷ, ಶಾಸಕ ಮಾನಪ್ಪ ಡಿ.ವಜ್ಜಲ ಸ್ವಾಗತಿಸಿದರು. ಶ್ರೀ ಜಗದ್ಗುರು ರಂಭಾಪುರಿ ಪೀಠದ ಆಡಳಿತಾಧಿಕಾರಿ ಎಸ್.ಬಿ ಹಿರೇಮಠ, ಶ್ರೀ ಪೀಠದ ವಾರ್ತಾ ಕಾರ್ಯದರ್ಶಿ ಡಾ. ಗುರುಮೂರ್ತಿ ಯರಗಂಬಳಿಮಠ, ವಾರ್ತಾ ಸಂಯೋಜನಾಧಿಕಾರಿ ಸಿ.ಎಚ್ ಬಾಳನಗೌಡ್ರ ಇದ್ದರು. ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲದ ಸಾಧಕರಿಂದ ವೇದಘೋಷ, ವಿಶ್ವೇಶ್ವರಯ್ಯ ಹಿರೇಮಠ ಲಿಂಗಸುಗೂರು, ಮಲ್ಲಿಕಾರ್ಜುನ ಹೂಗಾರ ಗದಗ ಹಾಗೂ ಷಣ್ಮುಖಯ್ಯ ಹಿರೇಮಠ ಕಂಚಿನೆಗಳೂರು ಇವರಿಂದ ಭಕ್ತಿ ಗೀತೆ ಜರುಗಿತು. ಶಿವಮೊಗ್ಗದ ಶಾಂತಾ ಆನಂದ ನಿರೂಪಿಸಿದರು.

ಸಂಜೆ ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಲಿಂಗಸುಗೂರು ನಗರದ ಪ್ರಮುಖ ಬೀದಿಗಳಲ್ಲಿ ಜರುಗಿತು. ಉತ್ಸವದಲ್ಲಿ ಸಹಸ್ರ ಸಂಖ್ಯೆಯಲ್ಲಿ ಜನತೆ ಮತ್ತು ವಿವಿಧ ಕಲಾ ತಂಡಗಳು ಭಾಗವಹಿಸಿದ್ದವು. ಶ್ರೀ ದೇವಿ ಉತ್ಸವವು ಸಹ ಅಡ್ಡಪಲ್ಲಕ್ಕಿ ಮಹೋತ್ಸವದೊಂದಿಗೆ ಸಾಗಿ ಬಂದಿದ್ದು ವಿಶೇಷವಾಗಿತ್ತು. ಅಡ್ಡಪಲ್ಲಕ್ಕಿಯ ಮೂಲಕ ಆಗಮಿಸಿದ ಶ್ರೀ ರಂಭಾಪುರಿ ಜಗದ್ಗುರುಗಳು ಈಶ್ವರ ದೇವಸ್ಥಾನದ ಬನ್ನಿ ಮಂಟಪದಲ್ಲಿ ಶಮಿ ಸೀಮೋಲ್ಲಂಘನ ಪೂಜೆ ನೆರವೇರಿಸಿದರು.

### ಇಷ್ಟಲಿಂಗ ಮಹಾಪೂಜೆ

ಬೆಳಿಗ್ಗೆ ವಿಶ್ವ ಶಾಂತಿ, ಲೋಕ ಕಲ್ಯಾಣಕ್ಕಾಗಿ ಶ್ರೀ ರಂಭಾಪುರಿ ಜಗದ್ಗುರುಗಳು ಶ್ರೀ ಈಶ್ವರ ದೇವಸ್ಥಾನದ ಶ್ರೀ ವೀರಭದ್ರೇಶ್ವರ ಸಮುದಾಯ ಭವನದಲ್ಲಿ ಇಷ್ಟಲಿಂಗ ಮಹಾಪೂಜೆ ನೆರವೇರಿಸಿದರು. ಇದಕ್ಕೂ ಪೂರ್ವದಲ್ಲಿ ಸ್ವತಃ ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಶ್ರೀ ರಾಘವೇಂದ್ರಸ್ವಾಮಿ ಮಠದಿಂದ ಶ್ರೀ ಈಶ್ವರ ದೇವಸ್ಥಾನದವರೆಗೆ ಅಗ್ರೋದಕವನ್ನು ಹೊತ್ತು ತಂದು ಪೂಜೆ ನಡೆಸಿದರು. ಅಗ್ರೋದಕ ಮೆರವಣಿಗೆಯಲ್ಲಿ ಕುಂಭಗಳನ್ನು ಹೊತ್ತ ಮಹಿಳೆಯರು ವಿವಿಧ ವಾದ್ಯ ಮೇಳದವರು ಪಾಲ್ಗೊಂಡಿದ್ದರು.

# ಪರಸ್ಪರ ಸೌಹಾರ್ದತೆಯಿಂದ ಬದುಕುವುದನ್ನು ಕಲಿಯಿರಿ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಪಟ್ಟಣದ ಜ.ತೋಂಟದಾರ್ಯ ಶಾಖಾ ಮಠದಲ್ಲಿ ತೋಂಟ-ದಾರ್ಯ ಲಿಂ.ಡಾ. ಸಿದ್ದಲಿಂಗ ಸ್ವಾಮೀಜಿ ಪುಣ್ಯಸ್ಮರಣೆ ಮತ್ತು ಮಧುವರಸ ಹರಳಯ್ಯನವರ ಹುತಾತ್ಮ ದಿನವನ್ನು ಶ್ರೀ ನಿಜಗುಣ ಪ್ರಭು ತೊಂಟಾದಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಆಚರಿಸಲಾಯಿತು.

ಶ್ರೀ ನಿಜಗುಣ ಪ್ರಭು ತೊಂಟದಾರ್ಯಸ್ವಾಮೀಜಿ ಮಾತನಾಡಿ, ದ್ವೇಷ ಮಾಡುವುದನ್ನು ಬಿಟ್ಟು ಎಲ್ಲರನ್ನು ಪ್ರೀತಿಯಿಂದ ಕಾಣಬೇಕು. ದ್ವೇಷದಿಂದ ಏನನ್ನು ಸಾಧಿಸಲು ಸಾಧ್ಯವಿಲ್ಲ. ಪ್ರೀತಿ ವಿಶ್ವಾಸದಿಂದ, ಪರಸ್ಪರ ಸೌಹಾರ್ದತೆಯಿಂದ ಬದುಕುವುದನ್ನು ಕಲಿಯಬೇಕು. ವಿಜಯ ದಶಮಿ ದಿನವೇ ಮಧುವರಸ ಹರಳಯ್ಯನವರನ್ನು ಎಳೆಹೊಟ್ಟೆ ಶಿಕ್ಷೆಗೆ ಒಳಪಡಿಸಿದಾಗ ಹುತಾತ್ಮರಾಗಿದ್ದು, ಅವರ ಸ್ಮರಣೆ ಕೂಡಾ ಮಾಡಬೇಕು. ವಿಜಯ ದಶಮಿ ಹಬ್ಬದಂದು ಬನ್ನಿ ಕೊಟ್ಟು ನಂತರ ಡಾ.ತೋಂಟದ ಸಿದ್ದಲಿಂಗ ಮಹಾಸ್ವಾಮೀಜಿ ಲಿಂಗೈಕ್ಯರಾಗಿದ್ದಾರೆ ಎಂದರು.



ಈ ಸಂದರ್ಭದಲ್ಲಿ ಭಕ್ತರು ಪರಸ್ಪರ ಬನ್ನಿ ವಿನಿಮಯ ಮಡಿಕೊಂಡರು ವಿಜಯದಶಮಿ ಆಚರಣೆ ಮಾಡಿದರು. ಪಾಲಾಕ್ಷಿಗಣದಿನ್ನಿ, ಎಚ್.ವಿರೂಪಾಕ್ಷಗೌಡ, ಪವನ ಭೋಪ್ರಾ, ನಾಗೇಶ ಹುಬ್ಬಳ್ಳಿ, ಗಿರೀಶಗೌಡ ಪಾಟೀಲ, ಡಿ.ಜಿ ಮಗಜಿ, ವಿರೇಂದ್ರ ಅಂಗಡಿ, ಉಮೇಶ ಹಿರೇಮಠ, ನಿಂಗೂ ಸೊಲಗಿ, ಬಿ.ಎಸ್ ಬಿಸನಳ್ಳಿ, ವೀರಣ್ಣ ಶೀರಿ, ಅಶೋಕ ಹುಬ್ಬಳ್ಳಿ, ಈಶಣ್ಣ ಬೆಟಗೇರಿ, ಸುಕನ್ಯಾ ಕಬ್ಬೂರು, ಶಾಂತಾ ಕುಬಸದ, ಪುಷ್ಪಾ ಶೀರಿ, ಶಿವಗಂಗಾ ನವಲಗುಂದ, ಅನ್ನಕ್ಕ ಸಜ್ಜನ, ಶಾಂತ ಹಿರೇಮಠ ಮುಂತಾದವರಿದ್ದರು.

# ಚನ್ನಮ್ಮಳ ಸಾಹಸ ಇಂದಿನ ಯುವ ಪೀಳಿಗೆಗೆ ಆದರ್ಶ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸ್ವತಂತ್ರ ಭಾರತದ ಬೆಳ್ಳಿಚುಕ್ಕಿ ಕಿತ್ತೂರ ಚನ್ನಮ್ಮ ಕನ್ನಡ ನಾಡಿನ ಸಂರಕ್ಷಣೆ ಹಾಗೂ ಸ್ವಾಭಿಮಾನಕ್ಕಾಗಿ ಜೀವನವನ್ನೇ ಸಮರ್ಪಿಸಿಕೊಂಡ ಪ್ರಥಮ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿದ್ದಾಳೆ ಎಂದು ಪಂಚಮಸಾಲಿ ಸಮಾಜದ ತಾಲೂಕಾಧ್ಯಕ್ಷ ಮಂಜುನಾಥ ಮಾಗಡಿ ಹೇಳಿದರು.

ಅವರು ವೀರರಾಣಿ ಕಿತ್ತೂರ ಚನ್ನಮ್ಮಳ 245ನೇ ಜಯಂತ್ಯುತ್ಸವ ಹಾಗೂ 200ನೇ ವಿಜಯೋತ್ಸವದ ಅಂಗವಾಗಿ ಪಟ್ಟಣದ ಹಳೆ ಬಸ್ ನಿಲ್ದಾಣದ ಕಿತ್ತೂರ ಚನ್ನಮ್ಮಳ ವೃತ್ತದ ಪುತ್ಥಳಿಗೆ ಪೂಜೆ ಸಲ್ಲಿಸಿ ಮಾತನಾಡುತ್ತ, ಚನ್ನಮ್ಮಳ ದೇಶಪ್ರೇಮ, ಶೌರ್ಯ, ಸಾಹಸ ಇಂದಿನ ಯುವ ಪೀಳಿಗೆಗೆ ಆದರ್ಶವಾಗಬೇಕು. ಚನ್ನಮ್ಮಳಂತಹ ವೀರ ಮಹಿಳೆಯಿಂದ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗೂ ಸಮಾನ ಸ್ಥಾನಮಾನ, ಗೌರವ ಸಿಗುವಂತಾಗಿದೆ. ಕೇವಲ ಜಯಂತಿ, ವಿಜಯೋತ್ಸವಗಳಿಗೆ ಚನ್ನಮ್ಮನ ಸ್ಮರಣೆ ಸೀಮಿತವಾಗದೇ ವರ್ಷದುದ್ದಕ್ಕೂ ಇಂತವರ ಸ್ಫೂರ್ತಿದಾಯಕ ಸ್ಮರಣೆಯ ಕಾರ್ಯಕ್ರಮಗಳು ಜರುಗಬೇಕು ಎಂದರು. ದೇವಣ್ಣ ಬಳಿಗಾರ ಮಾತನಾಡಿದರು. ಶಿವನಗೌಡ್ರ ಅಡರಕಟ್ಟಿ, ಶಿವಯೋಗಪ್ಪ ಚಂದರಗಿ, ಪುರಸಭೆ ಸದಸ್ಯ ಮಹಾದೇವಪ್ಪ ಅಣ್ಣಿಗೇರಿ, ದ್ಯಾಮಣ್ಣ ಕಮತದ, ನಾಗರಾಜ ಚಿಂಚಲಿ, ಶಂಕ್ರಣ್ಣ ಬ್ಯಾಡಗಿ, ಸಿದ್ದಲಿಂಗೇಶ ಮರಳಿಹಳ್ಳಿ, ಮುರುಗೇಂದ್ರಸ್ವಾಮಿ ಹಿರೇಮಠ, ಶಿವಾನಂದ ಯರ್ಲಗಟ್ಟಿ, ಮಾಂತೇಶ ಅಣ್ಣಿಗೇರಿ, ರಾಜು ಲಿಂಬಿಕಾಯಿ, ಪ್ರಕಾಶ ಕಮಡೊಳ್ಳಿ, ನಿಂಗಪ್ಪ ಅಣ್ಣಿಗೇರಿ, ಭೈರಪ್ಪ ಹುಬ್ಬಳ್ಳಿ, ಮಲ್ಲಿಕಾರ್ಜುನ ನೀರಲೋಟಿ, ಚಂದ್ರು ಮಾಗಡಿ, ಮಾಂತೇಶ ಗೋಡಿ, ರಾಜು ಮೆಕ್ಕಿ, ಮಹಾಂತೇಶ ಉಮಚಗಿ, ನವೀನ ಕುಂಬಾರ, ಮಂಜುನಾಥ ಕುಂಬಾರ, ಸೋಮು ಭದ್ರಾಪುರ, ಸಂತೋಷ ಗೋಡಿ, ಮಲ್ಲಪ್ಪ ಕುಂಬಾರ, ನಾಗರಾಜ ಅಣ್ಣಿಗೇರಿ, ಶಂಕರ ಕುಂಬಾರ ಮುಂತಾದವರಿದ್ದರು.



# ದೇವಿ ಪುರಾಣ ಮಂಗಲೋತ್ಸವ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಯತ್ನಟ್ಟಿ ಶ್ರೀ ಬಸವರಾಜೇಶ್ವರ ಮಠದಲ್ಲಿ ದೇವಿ ಪುರಾಣ ಮಂಗಲೋತ್ಸವದ ಕಾರ್ಯಕ್ರಮ ನೆರವೇರಿತು. ಸಾಹಿತಿ ಡಾ. ಷಣ್ಮುಖಯ್ಯ ತೋಟದ ಮಾತಾನಾಡಿ, ವಿಜಯದಶಮಿಯ ಮಹತ್ವವನ್ನು ತಿಳಿಸಿದರು. ಪ್ರತಿ ವರ್ಷದಂತೆ ದೇವಿ ಪುರಾಣವನ್ನು ಪಠಣ ಮಾಡಿದ ಶಂಕರಯ್ಯ ಮೈನಹಳ್ಳಿ, ಈಶಪ್ಪ ಮಾಸ್ತರ ಓಜನಹಳ್ಳಿ ಮತ್ತು ತಬಲಾ ಸಾಥ್ನೀಡಿದಶರಣಯ್ಯ ಕಾಟ್ರಳ್ಳಿ, ಗದ್ದುಗೆ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಲಾಯಿತು. ಸಿದ್ದಣ್ಣ ಪಾಟೀಲ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.



**ಲಿಂಬಯ್ಯಸ್ವಾಮಿ ಮಠದಲ್ಲಿ ದೀಪಾರಾಧನೆ, ಸನ್ಮಾನ ಕಾರ್ಯಕ್ರಮ**

# ಆದರ್ಶ ಜೀವನ ಮೌಲ್ಯಗಳೊಂದಿಗೆ ಸಮಾಜ ಕಟ್ಟಬೇಕು



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ನವರಾತ್ರಿ ಹಬ್ಬದ ಪವಿತ್ರ ಕಾಲದಲ್ಲಿ ಕೈಗೊಳ್ಳುವ ಧರ್ಮ ಕಾರ್ಯದಿಂದ ಮನುಷ್ಯನಲ್ಲಿನ ಅಜ್ಞಾನ, ಅಂಧಕಾರ, ದುರ್ಗುಣಗಳು ನಾಶವಾಗಿ ಸಾತ್ವಿಕ ಸದ್ಗುಣಗಳೊಂದಿಗೆ ದೈವತ್ವ ಪ್ರಾಪ್ತವಾಗುತ್ತದೆ ಎಂದು ಹೂವಿನಶಿಗ್ಲಿಯ ಶ್ರೀ ಚನ್ನವೀರ ಮಹಾಸ್ವಾಮಿಗಳು ನುಡಿದರು.

ಅವರು ಪಟ್ಟಣದ ಲಿಂಬಯ್ಯಸ್ವಾಮಿಮಠದಲ್ಲಿ ಸೋಮವಾರ ನವರಾತ್ರಿ ನಿಮಿತ್ತ ನಡೆದ ನಂದಾ ದೀಪಾರಾಧನೆ ಮತ್ತು ಸನ್ಮಾನ ಕಾರ್ಯಕ್ರಮ ಸಾನಿಧ್ಯ ವಹಿಸಿ ಮಾತನಾಡಿದರು.

ಸತ್ಯ, ಧರ್ಮ, ನ್ಯಾಯ, ನೀತಿಗಳ ಗೆಲುವಿನ ಸಂಕೇತದ ವಿಜಯದಶಮಿ ಹಬ್ಬದ ಸಂದರ್ಭದಲ್ಲಿ ಎಲ್ಲರೂ ಬದುಕಿನಲ್ಲಿ ಪರಸ್ಪರ ಪ್ರೀತಿ, ಸಹನೆ, ಆದರ್ಶ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡು ಸುಂದರ ಸಮಾಜ ಕಟ್ಟುವತ್ತ ಸಾಗಬೇಕಾಗಿದೆ. ಅಂತೆಯೇ ಲಿಂಬಯ್ಯಸ್ವಾಮಿ ಪ್ರತಿಷ್ಠಾನ ಧಾರ್ಮಿಕ ಆಚರಣೆಯ ಕಾರ್ಯಕ್ರಮದಲ್ಲಿ ಸಮಾಜೋಪಯೋಗಿ ಕಾರ್ಯ ಮಾಡುವ ಮತ್ತು ಸುಪ್ತ ಚೇತನಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಸಮಾಜದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಸುಪ್ತಚೇತನ ವ್ಯಕ್ತಿಗಳನ್ನು ಸನ್ಮಾನಿಸಲಾಯಿತು. ಕಾಯಕಜೀವಿ ಗೌರಮ್ಮ ಯಳಮಲಿ, ವಿಜಯಕುಮಾರ ನಿಂಗಪ್ಪ ಹಾಲಿ ಹಾಗೂ ಬಡವರ, ನಿರ್ಗತಿಕರಿಗೆ ಅನ್ನದ ಸೇವೆ ಸಲ್ಲಿಸುತ್ತಿರುವ ಕರಿಯಪ್ಪ ನೀಲಪ್ಪ ಶಿರಹಟ್ಟಿ ಇವರುಗಳನ್ನು ಶ್ರೀಮಠದಿಂದ ಗೌರವಿಸಲಾಯಿತು.

ಲಿಂಬಯ್ಯಸ್ವಾಮಿ ಪ್ರತಿಭಾ ಪ್ರತಿಷ್ಠಾನದ ಅಧ್ಯಕ್ಷ ಶಿವಪ್ರಕಾಶ ಲಿಂಬಯ್ಯಸ್ವಾಮಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಮಾಜಿ ಶಾಸಕ ಜಿ.ಎಸ್ ಗಡ್ಡದೇವರಮಠ ವಹಿಸಿ ಮಾತನಾಡಿದರು. ಪುರಸಭೆ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಭಿಮಸೇನ ಉಗ್ರದ ಉಪನ್ಯಾಸ ನೀಡಿದರು. ಮಾಜಿ ಶಾಸಕ ರಾಮಣ್ಣ ಲಮಾಣಿ, ಧರ್ಮದರ್ಶಿಗಳಾದ ಆನಂದ ಗಡ್ಡದೇವರಮಠ, ಚಿದಾನಂದ ಲಿಂಬಯ್ಯಸ್ವಾಮಿಮಠ, ಬಸಣ್ಣ ಗಾಂಜಿ, ಈರಣ್ಣ ಅಂಕಲಕೋಟಿ, ಪ್ರವೀಣ ಬಾಳಿಕಾಯಿ, ದ್ರಾಕ್ಷಾಯಿಣಿ ಕೋಳಿವಾಡ, ರಾಮಣ್ಣ ಪಡಿಗೇರಿ, ಕೃಷ್ಣ ಕುಲಕರ್ಣಿ, ಶಾಂತರಾಜ ಓದುನವರ, ಸಾಹೇಬಜಾನ್ ಹವಾಲ್ದಾರ, ನಿಂಗಪ್ಪ ಕೊರದಾಳ, ಶರಣಪ್ಪ ಗುಳಗಣ್ಣವರ, ವಿ.ಜಿ ಪಡಗೇರಿ, ನಿಂಗಪ್ಪ ಬನ್ನಿ ಸೇರಿ ಲಿಂಬಯ್ಯಸ್ವಾಮಿ ಕುಟುಂಬದವರು ಉಪಸ್ಥಿತರಿದ್ದರು.

ಮಹೇಶ ಲಿಂಬಯ್ಯಸ್ವಾಮಿಮಠ, ಈಶ್ವರ ಮೆಡ್ಲೇರಿ, ನಾಗರಾಜ ಶಿಗ್ಲಿ ನಿರೂಪಿಸಿದರು. ನಂತರ ಶಾಂಭಯ್ಯ ಹಿರೇಮಠ ಅವರಿಂದ ಜಾನಪದ ಗೀತೆಗಳ ರಸಮಂಜರಿ ಕಾರ್ಯಕ್ರಮ ಜರುಗಿತು.

**ತೋಂಟದಾರ್ಯ ಮಠದಲ್ಲಿ ನಡೆದ ದಸರಾ ಉತ್ಸವದ ಬನ್ನಿ ವಿನಿಮಯದಲ್ಲಿ ತೋಂಟದ ಡಾ.ಸಿದ್ಧರಾಮ ಸ್ವಾಮೀಜಿ**

# ಪರಸ್ಪರ ಪ್ರೀತಿ-ವಿಶ್ವಾಸ, ಏಕತೆಯ ಪ್ರತೀಕವೇ ಬನ್ನಿ ಹಬ್ಬ



■ವಿಜಯಸಾಕ್ಷಿ ಸುದ್ದಿ, ಗದಗ

ಮನುಷ್ಯ- ಮನುಷ್ಯನಲ್ಲಿನ ಜಾತಿ, ವರ್ಗ,ವರ್ಣ ಭೇದ- ಭಾವ ತೊರೆದು, ಪರಸ್ಪರ ಭ್ರಾತೃತ್ವ, ವಿಶ್ವಾಸ ಮತ್ತು ಪ್ರೀತಿಯಿಂದಮಾನವ ಸಂಬಂಧಗಳನ್ನು ಬೆಸೆಯುವ ಹಬ್ಬವೇ ಬನ್ನಿ ಹಬ್ಬ. ಮನುಷ್ಯನಲ್ಲಿರುವ ಕಾಮ ಕ್ರೋಧ, ಲೋಭ, ಮೋಹ, ಮಧ, ಮತ್ಸರದಂತ ಅರಿಷಡ್ವರ್ಗಗಳ ಮೇಲೆ ನಾವು ಸಾಧಿಸ ಬೇಕಾದ ವಿಜಯವೇ ವಿಜಯದಶಮಿ ಎಂದು ತೋಂಟದಾರ್ಯ ಮಠದ ಪೀಠಾಧೀಪತಿ ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ತಿಳಿಸಿದರು.

ಜಗದ್ಗುರು ತೋಂಟದಾರ್ಯ ಮಠದಲ್ಲಿ ನಡೆದ ದಸರಾ ಹಬ್ಬದ ಸಾಂಪ್ರಾದಾಯಿಕ ಬನ್ನಿ ಹಬ್ಬದಲ್ಲಿ ಬನ್ನಿಯನ್ನು ವಿನಿಮಯ ಮಾಡುವ ಮೂಲಕ ಮಾತನಾಡಿದಅವರು, ಅಕ್ಕಮಹಾದೇವಿಯವರ ವಚನವನ್ನು ಉಲ್ಲೇಖಿಸಿ 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿ ದಡೆಂತಯ್ಯಾ? ಕಾಡು ಪ್ರಾಣಿಗಳನ್ನು ಪ್ರೀತಿ ಮಾಡಿದಾಗ ಅವು ಸಹಿತ ಅಷ್ಟೇ ಪ್ರೀತಿಯಿಂದ ನಡೆದುಕೊಳ್ಳುತ್ತವೆ. ಮನುಷ್ಯನಿಗೆಸ್ತುತಿ-ನಿಂದನೆಗಳು ಬರುವುದು ಸಹಜ, ಅವುಬಂದಾಗ ಕೋಪ-ತಾಪಗಳನ್ನು ಮನುಷ್ಯ ತಾಳದೇ ಸಮಾಧಾನಿ ಯಾಗಿರಬೇಕು.

ಎಂತಹ ಸುಖ-ದುಃಖದ ಪರಿಸ್ಥಿತಿಗಳಲ್ಲಿ ಯೂಮನುಷ್ಯ ಹಿಗ್ಗದೆ-ಕುಗ್ಗದೆ ಸ್ಥಿತಪ್ರಜ್ಞನಾಗಿ ಬದುಕುವುದನ್ನು ರೂಢಿಸಿಕೊಳ್ಳಬೇಕು ಎಂದು ಡಾ. ಸಿದ್ಧರಾಮ ಸ್ವಾಮೀಜಿವಿಶ್ಲೇಷಿಸಿದರು. ಬಂಗಾರತುಕ್ಕು ಹಿಡಿಯಲಾರದ ಅಮೂಲ್ಯ ಲೋಹ.

ಈ ಬಂಗಾರದಂತಹ ಗುಣ ಎಲ್ಲರಲ್ಲಿಯೂ ಬರಬೇಕು. ಮನುಷ್ಯ ಬಣ್ಣವನ್ನು ಬದಲಿಸದ ಬಂಗಾರದಂತೆ ಬದುಕಬೇಕು ಎಂಬ ಉದ್ದೇಶದಿಂದ ಪೂರ್ವಜರು ಬನ್ನಿ-ಬಂಗಾರವನ್ನು ವಿನಿಮಯ ಮಾಡುವ ಸತ್ಪರಂಪರೆಯನ್ನುಆ ಚರಣೆಯಲ್ಲಿ ತಂದಿದ್ದಾರೆಎಂದು ಸ್ವಾಮೀಜಿಅವರು ಬನ್ನಿ ವಿನಿಮಯದ ಪರಂಪರೆಯನ್ನು ವಿವರಿಸಿದರು.

ಪ್ರತಿವರ್ಷದ ಪದ್ಧತಿಯಂತೆ ಕೆಳದಿ ಅರಸರು ಶ್ರೀಮಠಕ್ಕೆ ನೀಡಿದ ಐತಿಹಾಸಿಕ ಬಂಗಾರದ ಪಾದುಕೆಗಳನ್ನು ಭಕ್ತಾದಿಗಳ ದರ್ಶನಕ್ಕೆ ಪ್ರದರ್ಶಿಸಲಾಯಿತು. ಅಕ್ಕಮಹಾದೇವಿಯವರ ವಚನ ಮುದ್ರಿತಕರ ಪತ್ರವನ್ನು ನೆರೆದ ಭಕ್ತರಿಗೆ ಉಚಿತವಾಗಿ ಹಂಚಲಾಯಿತು.

ರೇವಣಸಿದ್ದಯ್ಯ ಮರಿದೇವರ ಮಠ ಅವರಿಂದ ಸುಶ್ರಾವ್ಯ ವಚನ ಸಂಗೀತ ನಡೆಯಿತು. ಅಣ್ಣಪ್ಪ ಸುತಾರತಬಲಾ ಸಾಥ್ ನೀಡಿದರು. ಎಸ್. ಎಸ್. ಕಳಸಾಪೂರಶೆಟ್ಟರು ಬನ್ನಿ ಮುಡಿದು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಲಿಂಗಾಯತ ಪ್ರಗತಿಶೀಲ ಸಂಘ, ತೋಂಟದಾರ್ಯ ಜಾತ್ರಾ ಮಹೋತ್ಸವದ ಸರ್ವ ಸದಸ್ಯರು, ಗದಗ ಮಹಾನಗರದ ಜನತೆ ಸೇರಿದಂತೆ ಶ್ರೀಮಠದಎಲ್ಲ ಸದ್ಭಕ್ತರುಸ್ವಾಮೀಜಿಅವರಿಗೆ ಬನ್ನಿಯನ್ನು ಭಕ್ತಿಭಾವದಿಂದ ಸಮರ್ಪಿಸಿದರು. ರತ್ನಕ್ಕಾ ಪಾಟೀಲ ನಿರೂಪಿಸಿದರು. ಮಾರುತಿ ಬುಕ್ ಸೆಂಟರ್ ಮಾಲೀಕ ಸುರೇಶ ಅಂಗಡಿ ಮತ್ತು ಸಿದ್ಧಲಿಂಗೇಶ ಬಸವರಾಜ ಅಂಗಡಿಕರ ಪತ್ರ ಸೇವೆ ಸಲ್ಲಿಸಿದರು.



ಬೆಟಗೇರಿಯ ಎಸ್‌ಎಸ್‌ಕೆ ಸಮಾಜದ ಪಂಚ ಟ್ರಸ್ಟ್ ಕಮಿಟಿ, ಎಸ್‌ಎಸ್‌ಕೆ ಸಮಾಜದ ತರುಣ ಸಂಘ, ಎಸ್‌ಎಸ್‌ಕೆ ಸಮಾಜದ ಮಹಿಳಾ ಮಂಡಳದ ಸಂಯುಕ್ತಾಶ್ರಯದಲ್ಲಿ ಎಸ್‌ಎಸ್‌ಕೆ ಸಮಾಜದ ಆರಾಧ್ಯ ಜಗದಂಬಾ ದೇವಿಗೆ ವಿಜಯ ದಶಮಿ ನಿಮಿತ್ತ ವಿಶೇಷ ಅಲಂಕಾರ ನೆರವೇರಿಸಲಾಗಿತ್ತು.

### 'ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟಿ' ಸಂದೇಶದೊಂದಿಗೆ ಪಾದಯಾತ್ರೆ ಹೊರಟ ತಂಡ

# ಆರುಷಿ ಯೋಜನೆಯ ಸಮರ್ಪಕ ಜಾರಿಯಾಗಲಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಜಾರಿಯಾಗುವ ಮಹತ್ವದ ಕಾಯ್ದೆ, ಯೋಜನೆಗಳು ಸಮರ್ಪಕ ಅನುಷ್ಠಾನವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಹೆಣ್ಣು ಭ್ರೂಣ ಹತ್ಯೆ ತಡೆ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆ ಕಾಯ್ದೆ ಕಡ್ಡಾಯ ಅನುಷ್ಠಾನಕ್ಕಾಗಿ ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ದಾವಣಗೆರೆ ಜಿಲ್ಲೆಯ ಹೊನ್ನಾಳಿಯ ಸಾಮಾಜಿಕ ಕಾರ್ಯಕರ್ತ ಚನ್ನೇಶ್ ಜಕ್ಕಲಿ ಹಾಗೂ ಅವರ ಸಂಗಡಿಗರು ಕನ್ಯಾಕುಮಾರಿಯಿಂದ ದಿಲ್ಲಿಯವರೆಗೆ ಪಾದಯಾತ್ರೆ ಕೈಗೊಂಡಿದ್ದಾರೆ.

ಪಾದಯಾತ್ರೆಯ ತಂಡ ಲಕ್ಷ್ಮೇಶ್ವರಕ್ಕೆ ಆಗಮಿಸಿದ ವೇಳೆ ಮಾಹಿತಿ ಹಂಚಿಕೊಂಡ ಚನ್ನೇಶ, ಕಳೆದ ಸೆ.24ರಿಂದ ಕನ್ಯಾಕುಮಾರಿಯಿಂದ ಪಾದಯಾತ್ರೆ ಪ್ರಾರಂಭಿಸಲಾಗಿದೆ. 3650 ಕಿ.ಮೀ ಪಾದಯಾತ್ರೆ ಇದಾಗಿದ್ದು ನಿತ್ಯ ಸರಾಸರಿ 40 ಕಿ.ಮೀ ಪಾದಯಾತ್ರೆ ಮಾಡುತ್ತಾರೆ. ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರ ಪ್ರದೇಶ ರಾಜ್ಯದ ಮೂಲಕ 2024ರ ಜನವರಿ 5ರಂದು ದೆಹಲಿ ತಲುಪುವ ಗುರಿಯೊಂದಿಗೆ ಸಾಗುತ್ತಿದ್ದೇವೆ. ಪಾದಯಾತ್ರೆಗೆ ನನ್ನ ಸ್ವಂತ ದುಡಿಮೆಯ ಹಣದ ಜತೆಗೆ ಗೆಳೆಯರ ಮತ್ತು ದಾನಿಗಳ ಸಹಕಾರವೂ ಇದೆ. ಮಾರ್ಗದುದ್ದಕ್ಕೂ ಪೊಲೀಸರು, ನಾಗರಿಕರು, ಮಾಧ್ಯಮದವರು ಸಹಕಾರ ನೀಡುತ್ತಿದ್ದಾರೆ.



> ಆರುಷಿ ಯೋಜನೆ ಜಾರಿಗೊಳಿಸಬೇಕು ಎಂಬ ಉದ್ದೇಶದಿಂದ ಪಾದಯಾತ್ರೆ ನಡೆಸುತ್ತಿದ್ದೇವೆ. ನಮ್ಮ ದೇಶದಲ್ಲಿ ಕಾನೂನುಗಳು ಜಾರಿಯಾಗುತ್ತವೆಯೇ ಹೊರತು ಸರಿಯಾಗಿ ಅನುಷ್ಠಾನವಾಗದೆ ನೂರಾರು ಯೋಜನೆಗಳು ಹಾಗೆಯೇ ಉಳಿಯುವಂತಾಗಿದೆ. ಕೇಂದ್ರ ಸರಕಾರ ಈ ಕುರಿತಂತೆ ಯೋಜನೆಯ ಸಮರ್ಪಕ ಅನುಷ್ಠಾನ ಮಾಡುವದು ಅವಶ್ಯವಾಗಿದೆ ಪ್ರಧಾನಿ ಮೋದಿಯವರನ್ನು ಭೇಟಿ ಮಾಡಲು ರಾಜ್ಯ ಸರಕಾರ ಅವಕಾಶ ಮಾಡಿಕೊಡಬೇಕು. ಪ್ರಧಾನಿ ಬೇಟಿಗೆ ಅವಕಾಶ ದೊರೆಯದಿದ್ದಲ್ಲಿ ಇದು ನನ್ನ ಸೋಲಲ್ಲ, ರಾಜ್ಯ ಸರಕಾರದ ಹಾಗೂ ಯುವಶಕ್ತಿಯ ಸೋಲಾಗುತ್ತದೆ.
>
> – ಚನ್ನೇಶ ಜಕ್ಕಲಿ.
> ಪಾದಯಾತ್ರೆ ಕೈಗೊಂಡ ಸಾಮಾಜಿಕ ಕಾರ್ಯಕರ್ತ.

ಹೆಣ್ಣು ಭ್ರೂಣಹತ್ಯೆ ತಡೆಯುವ ಅರುಷಿ ಯೋಜನೆ ಸಮರ್ಪಕ ಜಾರಿಯಾಗಲಿ. ತಾಯಿಯ ಗರ್ಭದಲ್ಲಿರುವ ಭ್ರೂಣಕ್ಕೆ ಡಿಜಿಟಲ್ ಕೋಡ್ ನೀಡಬಹುದಾಗಿದ್ದು ಶಿಶು ಜನನದ ಬಳಿಕ ಆಧಾರ್ ಕಾರ್ಡ್ ಸಹಿತ ಎಲ್ಲ ಯೋಜನೆಗಳ ಕಾರ್ಡ್‌ಗಳನ್ನು ನೇರವಾಗಿ ಮನೆಗೆ ಕಳುಹಿಸಬಹುದಾಗಿದೆ. ಇದನ್ನು ಇಂದಿನ ತಾಂತ್ರಿಕ ಯುಗದಲ್ಲಿ ಸುಲಭವಾಗಿ ಮಾಡಬಹುದಾಗಿದೆ ಮತ್ತು ಪ್ರತಿ ಮಗುವಿನ ಸಂಪೂರ್ಣ ಮಾಹಿತಿಯನ್ನು ತಿಳಿಯಬಹುದಾಗಿದೆ ಎಂದು ಪ್ರತಿಪಾದಿಸುತ್ತಾರೆ ಚನ್ನೇಶ.




ಗರ್ಭಿಣಿಯರಿಗೆ ಆಧಾರ್ ಮಾದರಿಯಲ್ಲಿ ಭ್ರೂಣಕ್ಕೆ ವಿಶಿಷ್ಟ ಗುರುತಿನ ಸಂಖ್ಯೆ ನೀಡುವುದೇ ಆರುಷಿ ಯೋಜನೆಯ ವಿಶೇಷ. ಈಗ ಜಾರಿಯಲ್ಲಿರುವ ತಾಯಿ ಕಾರ್ಡ್ ಮಾದರಿಯಲ್ಲಿ, ಗರ್ಭಿಣಿಗೆ ಸಂಬಂಧಿಸಿದ ಪೂರ್ಣ ವಿವರಗಳು ಡಿಜಿಟಲ್ ರೂಪದಲ್ಲಿ ತಂತ್ರಾಂಶದಲ್ಲಿ ದಾಖಲಾಗುತ್ತವೆ. ದೇಶದ ಯಾವ ಭಾಗದಲ್ಲಿದ್ದರೂ ತಂತ್ರಾಂಶದಲ್ಲಿ ಅರುಷಿ ಗುರುತಿನ ಸಂಖ್ಯೆ ಹಾಕಿ ನೋಡಿದರೆ ಪೂರ್ಣ ವಿವರ ಲಭ್ಯವಾಗುತ್ತವೆ. ಗರ್ಭಿಣಿಯ ಆರೋಗ್ಯ ಸ್ಥಿತಿ, ಸ್ಕ್ಯಾನಿಂಗ್ ವಿವರ ಸೇರಿದಂತೆ ಎಲ್ಲವೂ ಅದರಲ್ಲಿ ದಾಖಲಾಗಬೇಕು. ನಾಲ್ಕು ಅಥವಾ ಐದನೇ ತಿಂಗಳಲ್ಲಿ ನಡೆಸುವ ಸ್ಕ್ಯಾನ್ ಸಂದರ್ಭದಲ್ಲಿ ಹೆಣ್ಣು ಭ್ರೂಣ ಎಂಬುದು ಗೊತ್ತಾದರೆ, ಎಂಟಿಪಿ ಕಾಯಿದೆ ಅಡಿಯಲ್ಲಿ ವೈದ್ಯಕೀಯ ಕಾರಣ ಮೇರೆಗೆ ಗರ್ಭಪಾತ ಮಾಡಿಸುತ್ತಾರೆ. ಇದು ಕೂಡ ತಪ್ಪಬೇಕು.

ಹೊಸ ಯೋಜನೆ ಜಾರಿಯಾದರೆ ಗರ್ಭಪಾತಕ್ಕೆ ಸೂಕ್ತ ಕಾರಣ ನೀಡುವಂತಹ ವ್ಯವಸ್ಥೆ ಬರಲಿದೆ. ಅಲ್ಲದೇ ಎಲ್ಲವೂ ಡಿಜಿಟಲ್ ವ್ಯವಸ್ಥೆಯಲ್ಲಿರುವುರಿಂದ ಅಪರಾಧ ಮತ್ತು ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟಲು ಸಾಧ್ಯವಾಗುತ್ತದೆ. ಇದರ ಜೊತೆ ಮಕ್ಕಳ ಹಕ್ಕುಗಳ ರಕ್ಷಣೆ ಸಹ ಸಮರ್ಪಕವಾಗಿ ಆಗಬೇಕು. ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎನ್ನುತ್ತಾರೆ ಚನ್ನೇಶ್.

## ಮಳೆರಾಯನ ಕೃಪೆಗಾಗಿ ಕತ್ತೆಗಳ ಮದುವೆ



■ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ತಿಮ್ಮಾಪೂರ ಗ್ರಾಮದಲ್ಲಿ ದಸರಾ ಹಬ್ಬದ ಕೊನೆಯ ದಿನದ ಪೂಜಾ ಅಂಗವಾಗಿ ಶ್ರೀ ಹುಡೇದ ಲಕ್ಷ್ಮಿ ದೇವಸ್ಥಾನದಲ್ಲಿ ಮಳೆರಾಯನ ಕೃಪೆಗಾಗಿ ಕತ್ತೆಗಳ ಮದುವೆ ಮಾಡಿಸಲಾಯಿತು.

ಈ ವರ್ಷ ಮುಂಗಾರು ಹಾಗೂ ಹಿಂಗಾರು ಹಂಗಾಮು ಮಳೆ ಕೈಕೊಟ್ಟ ಹಿನ್ನೆಲೆಯಲ್ಲಿ ಮಳೆರಾಯನ ಕೃಪೆಗಾಗಿ ಅನೇಕ ಪೂಜೆ ಹೋಮ ಹವನ ಯಜ್ಞ ಯಾಗ ಮಾಡಿದರೂ ಮಳೆ ಸುರಿಯದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಕತ್ತೆಗಳ ಮದುವೆ ಮಾಡಿದರು. ಸಾಂಪ್ರದಾಯಿಕವಾಗಿ ಸಾಕು ಪ್ರಾಣಿಗಳಾದ ಕತ್ತೆಗಳ ಮದುವೆಯನ್ನು ಅದ್ದೂರಿಯಾಗಿ ನಡೆಸಲಾಯಿತು.

ಮದುವೆಯ ಹಿನ್ನೆಲೆಯಲ್ಲಿ ಗದಗ–ಬೆಟಗೇರಿಯಿಂದ ಗಂಡು ಹಾಗೂ ಹೆಣ್ಣು ಕತ್ತೆಗಳನ್ನು ತರಿಸಿ ಮದುವೆಯ ಸಂಪ್ರದಾಯದಂತೆ ಅವುಗಳಿಗೆ ಅರಿಸಿಣ ಶಾಸ್ತ್ರವನ್ನು ಮಾಡಿಸಿ ನಂತರ ಸುರಗಿ ನೀರನ್ನು ಹಾಕಿ ವಸ್ತ್ರಾಭರಣಗಳನ್ನು ತೊಡಿಸಿ ತಾಳಿ ಕಟ್ಟಿಸಿ ಗ್ರಾಮಸ್ಥರ ಸಮ್ಮುಖದಲ್ಲಿ ಮದುವೆಯನ್ನು ಮಾಡಲಾಯಿತು.

ಮುತ್ತೈದೆಯರು ನವ ವಧು–ವರರಿಗೆ ಆರತಿ ಬೆಳಗಿ ಸಂತಸಪಟ್ಟರು. ನಂತರ ಕತ್ತೆಗಳನ್ನು ಮೆರವಣಿಗೆಯ ಮೂಲಕ ಗ್ರಾಮದ ತುಂಬೆಲ್ಲಾ ಸಂಚರಿಸಿ ಈಗಲಾದರೂ ಮಳೆರಾಯ ಭೂಮಿಗೆ ಬರಲೆಂದು ದೇವರಲ್ಲಿ ಭಕ್ತಿಯಿಂದ ಬೇಡಿಕೊಂಡರು. ನಂತರ ಮಹಾ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು.

ಮಾರುತಿ ಕಟಗಿ, ರವಿ ಗಂಗರಾತ್ರಿ, ಬಸವರಾಜ ದೇವರವರ, ಕುಮಾರ ಹೂಗಾರ, ಯಲ್ಲಪ್ಪ ಶಿಗರಗಡ್ಡಿ, ಲಿಂಬಣ್ಣ ಉಂಡಿ, ಶರಣಪ್ಪ ಗಾಜಿ, ಯಲ್ಲಪ್ಪ ಡಂಬಳ, ಬಾಳಪ್ಪ ಗಂಗರಾತ್ರಿ, ಯಲ್ಲಪ್ಪ ಎಚ್ ಬಾಬರಿ, ಶರಣಪ್ಪ ಜೋಗಿನ ಇನ್ನೂ ಮುಂತಾದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಪ್ರಗತಿಗೆ ಪೂರಕವಾದ ಪುರಾಣ ಪುಣ್ಯಕಥೆ ಆಲಿಸಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ನವರಾತ್ರಿಯ ಶುಭಕಾಲದಲ್ಲಿ ದೇವಾನುದೇವತೆಗಳ ಪುರಾಣ ಕೇಳುವುದರಿಂದ ಬದುಕಿನಲ್ಲಿ ದುಃಖ ದುಮ್ಮಾನಗಳು, ಕಷ್ಟ–ಕಾರ್ಪಣ್ಯಗಳು ಕಳೆದು ನವ ಚೈತನ್ಯ ತುಂಬುತ್ತದೆ ಎಂದು ಸಿಪಿಐ ನಾಗರಾಜ ಮಾಡಳ್ಳಿ ಹೇಳಿದರು.

ಪಟ್ಟಣದ ಆಸಾರ ಓಣಿಯ ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಶ್ರೀ ದುರ್ಗಾದೇವಿ ಪುರಾಣ ಮಂಗಲೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ನವರಾತ್ರಿಯಲ್ಲಿ ವಿದ್ಯೆ, ಸಂಪತ್ತು, ಸಮೃದ್ಧಿಯ ಪ್ರತೀಕವಾಗಿರುವ ಜಗನ್ಮಾತೆಯನ್ನು ಸ್ಮರಿಸುವ ಕಾರ್ಯ ಮಾಡಲಾಗುತ್ತದೆ. ಮಹಿಳೆಯರು ದಾರಾವಾಹಿ ನೋಡುವುದರ ಬದಲಾಗಿ, ಬದುಕಿನ ಪ್ರಗತಿಗೆ ಪೂರಕವಾದ ಪುರಾಣ ಪುಣ್ಯಕಥೆ ಆಲಿಸಬೇಕು. ಮಕ್ಕಳನ್ನೂ ಮೊಬೈಲ್ ಗೀಳಿನಿಂದ ತಪ್ಪಿಸಿ ತಮ್ಮೊಂದಿಗೆ ಕರೆತರಬೇಕು. ಪ್ರತಿವರ್ಷ ನವರಾತ್ರಿ ಸಂದರ್ಭದಲ್ಲಿ ದುರ್ಗಾದೇವಿ ದೇವಸ್ಥಾನದಲ್ಲಿ ದೇವಿಪುರಾಣ ಪ್ರವಚನ ಏರ್ಪಡಿಸುವ ಸಂಪ್ರದಾಯ ನೆರವೇರಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಹೇಳಿದರು.

ಈ ವೇಳೆ ನೂತನ ತಹಸೀಲ್ದಾರ ಮಂಜುನಾಥ ಅಮಾಸಿ ಅವರನ್ನು ಸನ್ಮಾನಿಸಲಾಯಿತು. ಹಿರಿಯರಾದ ದೇವಣ್ಣ ಬಳಿಗಾರ, ಮಂಜುನಾಥ ಮಾಗಡಿ, ತಿಪ್ಪಣ್ಣ ರೊಟ್ಟಿಗವಾಡ, ಅರ್ಚಕ ಮಲ್ಲೇಶಪ್ಪ ಪೂಜಾರ, ಪ್ರಕಾಶ ಗುತ್ತಲ, ರಾಜು ಲಿಂಬಿಕಾಯಿ, ಮಾಂತೇಶ ಅಣ್ಣಿಗೇರಿ, ಮಾಂತೇಶ ಗೋಡಿ ಮುಂತಾದವರಿದ್ದರು. ಹನಮಂತಸಾ ಚೌಧರಿ ಪುರಾಣ ಪಠಣ ಮತ್ತು ಗಂಗಯ್ಯ ಪೂಜಾರ ಪುರಾಣ ಪ್ರವಚನ ನೀಡಿದರು. ಎಲ್.ಆರ್ ಮಲ್ಲಸಮುದ್ರ ಸಂಗೀತ ಸೇವೆ ನೀಡಿದರು. ಜಿ.ಎಸ್ ಗುಡಗೇರಿ ಕಾರ್ಯಕ್ರಮ ನಿರ್ವಹಿಸಿದರು.

## ಅ.29ರಂದು ದತ್ತಿ ಉಪನ್ಯಾಸ, ಪುಸ್ತಕ ಬಿಡುಗಡೆ

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಗದಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಹೋಬಳಿ ಘಟಕ ಮುಳಗುಂದ ವತಿಯಿಂದ ಲಿ.ಗಂಗಮ್ಮ ಹಾಗೂ ಚನ್ನಬಸಪ್ಪ ಚವಡಿ ಇವರ ಸ್ಮರಣಾರ್ಥ ದತ್ತಿ ಉಪನ್ಯಾಸ ಹಾಗೂ ಅರಟಾಳ ರುದ್ರಗೌಡರು ಪುಸ್ತಕ ಬಿಡುಗಡೆ ಅ.29ರಂದು ಬೆಳಿಗ್ಗೆ 10.30ಕ್ಕೆ ಬಾಲಲೀಲಾ ಮಾಹಾಂತ ಶಿವಯೋಗಿ ಕಲಾಭವನದಲ್ಲಿ ಜರಗುವುದು ಎಂದು ಮುಳಗುಂದ ಹೋಬಳಿ ಘಟಕದ ಅಧ್ಯಕ್ಷ ಎಸ್.ಸಿ ಚವಡಿ ತಿಳಿಸಿದರು.



ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಧಾರವಾಡ ಮುರುಘಾಮಠ ಹಾಗೂ ಮುಳಗುಂದ ಗವಿಮಠದ ಮಲ್ಲಿಕಾರ್ಜುನ ಮಾಹಾಸ್ವಾಮಿಗಳು ಕಾರ್ಯಕ್ರಮದ ಸಾನ್ನಿಧ್ಯ ವಹಿಸಿಕೋಳ್ಳುವರು. ಸಮ್ಮುಖವನ್ನು ನೀಲಗುಂದ ಗುದ್ನೇಶ್ವರಮಠದ ಪ್ರಭುಲಿಂಗದೇವರು, ಅಧ್ಯಕ್ಷತೆಯನ್ನು ಗದಗ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ವಹಿಸುವರು. ಮುಖ್ಯ ಅತಿಥಿಗಳಾಗಿ ಎಸ್.ಎಂ ನೀಲಗುಂದ, ಎಂ.ಡಿ ಬಟ್ಟೂರ, ಕಸಾಪ ಕಾರ್ಯದರ್ಶಿ ಮಂಜುನಾಥ ಮಟ್ಟಿ, ಶಿವಬಸವ ಹಸಬಿ, ಅರಟಾಳ ರುದ್ರಗೌಡರು ಪಾಲ್ಗೊಳ್ಳಲಿದ್ದು, ಗಿಲಗಂಚಿ ಗುರುಶಿದ್ದಪ್ಪನವರ ಕುರಿತು ಶಕುಂತಲಾ ಸಿಂಧೂರ ಉಪನ್ಯಾಸ ನೀಡುವರು.

ಈ.ಎ ತಿಗಡಿ, ಚನ್ನಪ್ಪ ಬೆಂಗೇರಿ, ಶಿವಶರಣ ಕಲಬಶೆಟ್ಟರ, ಸನ್ಮಾನ ಲತಾ ಅರಳಿ, ಪರಿಮಳ ವಾಲಿ, ದಾವಲಸಾಬ ನರಗುಂದ, ಮಹ್ಮದಗೌಸ ಜಮಾಲಸಾಬನರ ಇವರಿಗೆ, ಸಂಗೀತ ಸೇವೆಯಲ್ಲಿ ಶ್ವೇತಾ ದೊಟಿಕಲ್ಲ, ಅಶ್ವಿನಿ ಬಂಡಾರಿ, ವಿಜಯಲಕ್ಷ್ಮೀ ಹಿರೇಮಠ ಭಾಗವಹಿಸುವರು ಎಂದು ತಿಳಿಸಿದರು.



ಮಂಡರಗಿ ಪಟ್ಟಣದ ಅನ್ನದಾನ್ನಿಶ್ವರ ಮಠದಲ್ಲಿ ಆವರಣದಲಿ ದಸರಾ ಹಬ್ಬದ ಪ್ರಯುಕ್ತ ಪರಸ್ಪರ ಬನ್ನಿ ವಿನಿಮಯ ಕಾರ್ಯಕ್ರಮ ಜರುಗಿತು. ಭಕ್ತರುನಾಡೋಜ ಡಾ.ಅನ್ನದಾನ್ನಿಶ್ವರ ಸ್ವಾಮೀಜಿ, ಮಲ್ಲಿಕಾರ್ಜುನ ಸ್ವಾಮೀಜಿ ಅವರಿಗೆ 'ಬನ್ನಿ ಸಮರ್ಪಿಸಿ, ಆಶೀರ್ವಾದ ಪಡೆದರು.

## ಶ್ರೀಗಳ ಮಾತು ಕಠೋರವಾದರೂ ಮನಸ್ಸು ಹೂವಾಗಿತ್ತು

▸▸ಮೊದಲನೇ ಪುಟದಿಂದ

ಮಾತನಾಡಿದ ನಿವೃತ್ತ ಐಎಎಸ್ ಅಧಿಕಾರಿ ಡಾ. ಎಸ್.ಎಂ ಜಾಮದಾರ, ಸನ್ಯಾಸ ಜೀವನದ ಏಕತಾನತೆಯನ್ನು ಹೋಗಲಾಡಿಸಲು ನಾನು ಸಮಾಜಮುಖಿಯಾದೆ ಎಂಬ ಲಿಂ. ತೋಂಟದ ಸಿದ್ದಲಿಂಗ ಶ್ರೀಗಳ ಮಾತು ನನ್ನನ್ನು ಕಾಡಿತು. ಇದರಿಂದ ಅನೇಕ ವಿಚಾರಗಳನ್ನು ಅವರಿಂದ ತಿಳಿದುಕೊಳ್ಳಲು ಸಾಧ್ಯವಾಯಿತು ಎಂದರು. ಸಮಾರಂಭದಲ್ಲಿ ಭೋಜರಾಜ ಸೊಪ್ಪಿಮಠ, ಬಸವರಾಜಪ್ಪ ಶರಣರು, ಡಾ. ರಾಜಶೇಖರ ಜಮದಂಡಿ, ಪ್ರೊ. ಶಂಕರಗೌಡ ಬಿರಾದಾರ ಹಾಗೂ ಡಾ. ರಮೇಶ ಕಲ್ಲನಗೌಡರ ಬರೆದ ಕೃತಿಗಳನ್ನು ಲೋಕಾರ್ಪಣೆಗೊಳಿಸಲಾಯಿತು.

ಜ.ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ, ಬೈರನಹಟ್ಟಿ ದೊರೆಸ್ವಾಮಿ ವಿರಕ್ತಮಠದ ಶಾಂತಲಿಂಗ ಸ್ವಾಮೀಜಿ, ಆಳಂದ ಅನುಭವ ಮಂಟಪದ ಕೋರಣೇಶ್ವರ ಸ್ವಾಮೀಜಿ, ಶಿರೋಳ ತೋಂಟದಾರ್ಯ ಮಠದ ಗುರುಬಸವ ಸ್ವಾಮೀಜಿ, ಚಿಂಚಣಿ ಅಲ್ಲಮಪ್ರಭು ಸಿದ್ಧಸಂಸ್ಥಾನದ ಮಠದ ಅಲ್ಲಮಪ್ರಭು ಸ್ವಾಮೀಜಿ, ಸಭಾಪತಿ ಬಸವರಾಜ ಹೊರಟ್ಟಿ, ಮಾಜಿ ಸಚಿವ ಎಸ್.ಎಸ್ ಪಾಟೀಲ, ಮಾಜಿ ಶಾಸಕರಾದ ಡಿ.ಆರ್ ಪಾಟೀಲ, ರಾಮಕೃಷ್ಣ ದೊಡ್ಡಮನಿ, ಮಾಜಿ ಸಂಸದ ಐ.ಜಿ ಸನದಿ, ಮನೋರೋಗ ತಜ್ಞ ಡಾ. ಆನಂದ ಪಾಂಡುರಂಗಿ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಅಬ್ದುಲ್ ಖಾದರ ನಟಕಟ್ಟಿನ ಮುಂತಾದವರು ಉಪಸ್ಥಿತರಿದ್ದರು.

## ದಶೇಂದ್ರಿಗಳನ್ನು ಗೆಲ್ಲುವುದೇ ವಿಜಯದಶಮಿ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಮನುಷ್ಯ ಸಂಗ್ರಹಿಸಿಟ್ಟಿದ್ದು ಉಳಿಯುವುದಿಲ್ಲ. ಸಮಾಜದ ಒಳಿತಿಗೆ ದಾನ ಮಾಡುವ ಮನೋಭಾವ ಹೊಂದಬೇಕು. ಭಕ್ತಿ–ವಿಶ್ವಾಸದಿಂದ ಕಾಯಕ ಮಾಡಿದರೆ ಫಲ ದೊರೆಯುತ್ತದೆ. ದಶೇಂದ್ರಿಗಳನ್ನು ಗೆಲ್ಲುವುದೇ ವಿಜಯದಶಮಿ. ಕರ್ಮೇಂದ್ರಿಗಳನ್ನು, ಜ್ಞಾನೇಂದ್ರಿಗಳನ್ನು ಗೆಲ್ಲುವುದರ ಜೊತೆಗೆ ಮನಸ್ಸನ್ನು, ಸ್ಥಿತಪ್ರಜ್ಞೆಯಲ್ಲಿ ಇಟ್ಟುಕೊಂಡಾಗ ಮಾತ್ರ ವಿಜಯ ದಶಮಿಯಾಗುತ್ತದೆ ಎಂದು ನಾಡೋಜ ಡಾ.ಅನ್ನದಾನೀಶ್ವರ ಮಹಾಸ್ವಾಮೀಜಿ ಹೇಳಿದರು.



ಪಟ್ಟಣದ ಜಗದ್ಗುರು ಅನ್ನದಾನೀಶ್ವರ ಮಠದಲ್ಲಿ ಹಮ್ಮಿಕೊಂಡಿದ್ದ 1811ನೇ ಮಾಸಿಕ ಶಿವಾನುಭವ ಹಾಗೂ ದಸರಾ ಹಬ್ಬದ ಕಾಯಕ ಪೂಜೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಜೋಯಿಸರ ಹರಳಹಳ್ಳಿ ಕಾರಂಜಿಮಠದ ಡಾ.ಶಿವಯೋಗಿ ದೇವರು ಮಾತನಾಡಿ, ಗುರುವಿನ ಕೃಪಾಶೀರ್ವಾದದಿಂದ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು. ಮನುಷ್ಯ ಕಾಯಕ ಮಾಡಿದವರಿಗೆ ಮಾತ್ರ ಗುರುವಿನ ಕೃಪೆ ದೊರೆಯುತ್ತದೆ. ಗುರುವಿನ ಸ್ಮರಣೆಯೊಂದಿಗೆ ಸುಂದರ ಜೀವನ ರೂಪಿಸಿಕೊಳ್ಳಬೇಕು. ವೀರಶೈವ ಲಿಂಗಾಯತ ಮಠಗಳು ಶಿಕ್ಷಣ ಕ್ಷೇತ್ರದ ಬೆಳವಣಿಗೆಗೆ ಹೆಚ್ಚಿನ ಕೊಡುಗೆ, ಆದ್ಯತೆ ನೀಡಿವೆ. ಹಿಂದೆ ಗುರುವಿರಬೇಕು, ಮುಂದೆ ಗುರಿ ಇರಬೇಕು ಎನ್ನುವಂತೆ ಗುರುವಿನ ಕೃಪೆಯಿಂದ ಗುರಿ ಹೊಂದಿ ಮುನ್ನಡೆದರೆ ಗುರಿಯನ್ನು ತಲುಪಲು ಸಾಧ್ಯ ಎಂದರು.

ಕಾರ್ಯಕ್ರಮದ ಭಕ್ತಿಸೇವೆ ವಹಿಸಿಕೊಂಡಿದ್ದ ಅನ್ನಪೂರ್ಣಮ್ಮ ಶಿವಶೆಟ್ಟರ ಹಾಗೂ ಎಂ.ಎಸ್ ಶಿವಶೆಟ್ಟರ ಕುಟುಂಬದವರಿಗೆ ಶ್ರೀಗಳು ಆಶೀರ್ವದಿಸಿದರು.

ಇದೇ ಸಂದರ್ಭದಲ್ಲಿ ಹಾನಗಲ್ಲ ಗುರುಕುಮಾರ ಶಿವಯೋಗಿಗಳವರ ಜನ್ಮಸ್ಥಳವಾಗಿರುವ ಜೋಯಿಸರ ಹರಳಹಳ್ಳಿಯಲ್ಲಿನ ಮಠದ ಅಭಿವೃದ್ಧಿಗೆ ಡಾ.ಅನ್ನದಾನೀಶ್ವರ ಶ್ರೀಗಳು ಶ್ರೀಮಠದಿಂದ 50ಸಾವಿರ ರೂ.ಗಳನ್ನು ಡಾ.ಶಿವಯೋಗಿ ದೇವರಿಗೆ ನೀಡಿದರು.

ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿ ಆಡಳಿತಾಧಿಕಾರಿ ಡಾ. ಬಿ.ಜಿ ಜವಳಿ, ಎಂ.ಎಸ್ ಶಿವಶೆಟ್ಟರ ಉಪಸ್ಥಿತರಿದ್ದರು. ಜಗದ್ಗುರು ಅನ್ನದಾನೀಶ್ವರ ಅಕ್ಕನ ಬಳಗದವರು ಪ್ರಾರ್ಥನೆ ಸಲ್ಲಿಸಿದರು. ಶಿಕ್ಷಕ ಎಸ್.ಎಸ್ ಮಠದ ಕಾರ್ಯಕ್ರಮ ನಿರ್ವಹಿಸಿದರು.

### ನಾಗದೇವರ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಅಭಿನವ ಸಿದ್ದವೀರ ಶ್ರೀಗಳು

# ಶ್ರೀಕ್ಷೇತ್ರ ಉತ್ತರೋತ್ತರವಾಗಿ ಬೆಳೆಯಲಿ



■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಸಿಂಗಟಾಲೂರು ಶ್ರೀ ವೀರಭದ್ರೇಶ್ವರನ ಸುಕ್ಷೇತ್ರವು ಪ್ರವಾಸಿತಾಣವಾಗಿ ಹೊರ ಹೊಮ್ಮುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಕಂದಗಲ್ ಪುರದ ಅಭಿನವ ಸಿದ್ದವೀರ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ಅವರು ಸುಕ್ಷೇತ್ರ ಸಿಂಗಟಾಲೂರು ಶ್ರೀ ವೀರಭದ್ರೇಶ್ವರ ದೇವಸ್ಥಾನದ ಉದ್ಯಾನವನದಲ್ಲಿ ನೂತನವಾಗಿ ಜೀರ್ಣೋದ್ಧಾರಗೊಂಡಿರುವ ನಾಗಪ್ಪನ ದೇವಸ್ಥಾನದ ಉದ್ಘಾಟನೆ ಹಾಗೂ ನಾಗದೇವರ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಸಿಂಗಟಾಲೂರು ಸುಕ್ಷೇತ್ರದಲ್ಲಿ ಹತ್ತು ಹಲವಾರು ಅಭಿವೃದ್ಧಿ ಕಾರ್ಯಗಳು ಯಾವುದೇ ಅಡೆತಡೆಗಳಿಲ್ಲದೆ ದೇವಸ್ಥಾನ ಟ್ರಸ್ಟ್ ಕಮಿಟಿ ಅಧ್ಯಕ್ಷ ಕರಬಸಪ್ಪ ಹಂಚಿನಾಳ, ಸದಸ್ಯರು ಹಾಗೂ ಭಕ್ತರ ಸಹಕಾರದಿಂದ ನಿರಂತರವಾಗಿ ನಡೆಯುತ್ತಾ ಬಂದಿವೆ. ನವರಾತ್ರಿಯ ಈ ಶುಭ ಸಂದರ್ಭದಲ್ಲಿ ಶ್ರೀ ಕ್ಷೇತ್ರದಲ್ಲಿ ವಿಶೇಷವಾಗಿರುವ ನಾಗದೇವರ ಪ್ರತಿಷ್ಠಾಪನೆಯನ್ನು ಮಾಡುತ್ತಿದ್ದು, ಮೂರು ಜನ ಪೂಜ್ಯರ ಸಾನಿಧ್ಯದಲ್ಲಿ ಕಾರ್ಯಕ್ರಮ ನಡೆಸಿದ್ದಾರೆ. ಶ್ರೀ–ಕ್ಷೇತ್ರ ಇನ್ನೂ ಉತ್ತರೋತ್ಥರವಾಗಿ ಬೆಳೆಯಲಿ ಎಂದರು.

ಕಮಿಟಿ ಅಧ್ಯಕ್ಷ ಕರಬಸಪ್ಪ ಹಂಚಿನಾಳ ಮಾತನಾಡಿ, ದೇವಸ್ಥಾನದ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ನಮ್ಮ ಕಮಿಟಿಯ ಎಲ್ಲ ಪದಾದಿಕಾರಿಗಳು ಹಾಗೂ ಸರ್ವ ಭಕ್ತರ ಸಹಕಾರದಿಂದ ಸಾಧ್ಯವಾಗಿದೆ. ಶೀಘ್ರದಲ್ಲಿಯೇ ಉದ್ಯಾನವನದ ಕಾಮಗಾರಿಯೂ ಸಹ ಪೂರ್ಣಗೊಳ್ಳಲಿದ್ದು, ಸಂಕ್ರಾಂತಿ ವೇಳೆಗೆ ಲೋಕಾರ್ಪಣೆಗೊಳಿಸಲು ಯೋಚಿಸಲಾಗುತ್ತಿದೆ. ನಾಗಪ್ಪನ ದೇವಸ್ಥಾನಕ್ಕೆ ಬಳ್ಳಾಯ ಭಕ್ತರಾದ ಸಿದ್ದಲಿಂಗಪ್ಪ ಕರ್ಜಗಿ ಕುಟುಂಬದವರು ಹೆಚ್ಚಿನ ರೀತಿಯಲ್ಲಿ ಕಾಣಿಕೆ ನೀಡುವ ಮೂಲಕ ಪ್ರಮುಖ ಕಾರಣೀಕರ್ತರಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಕಲಕೇರಿ–ವಿರುಪಾಪೂರದ ಮುದುಕೇಶ್ವರ ಶಿವಾಚಾರ್ಯ ಸ್ವಾಮೀಜಿ, ಬನ್ನಿಕೊಪ್ಪ, ಮೈಸೂರಿನ ಸುಜ್ಞಾನದೇವ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮಹಾದಾನಿಗಳಾದ ಸಿದ್ದಲಿಂಗಪ್ಪ ಕರ್ಜಗಿ ದಂಪತಿಗಳಿಗೆ ಹಾಗೂ ದೇವಸ್ಥಾನ ನಿರ್ಮಾಣ ಮಾಡಿದ ಕಾಳಿಮುತ್ತುಗೆ ಸನ್ಮಾನಿಸಿ ಗೌರವಿಸಲಾಯಿತು. ದೇವಸ್ಥಾನ ಟ್ರಸ್ಟ್ ಕಮಿಟಿ ಉಪಾಧ್ಯಕ್ಷ ಶೇಖಣ್ಣ ಬಾಲೇಹೊಸೂರು, ಸದಸ್ಯರಾದ ಕೊಟ್ರೇಶ ಬಳ್ಳೊಳ್ಳಿ, ಸುಭಾಸ ಬಾಗೇವಾಡಿ, ಕಾಶಯ್ಯ ಬೆಂತೂರುಮಠ, ಕರ್ಣಂ ಸಣ್ಣತಮ್ಮಪ್ಪ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಮೀಸಲಾತಿ ಪಡೆಯುವವರೆಗೂ ಹೋರಾಟ ನಿಲ್ಲದು

▸▸ಮೊದಲನೇ ಪುಟದಿಂದ

ಡಿ.4ರಿಂದ 15ರ ವರೆಗೆ ಸುವರ್ಣ ಸೌಧದಲ್ಲಿ ಅಧಿವೇಶನ ನಡೆಯಲಿದೆ. ಅಧಿವೇಶನ ಆರಂಭವಾಗುವದರೊಳಗೆ ನಮ್ಮ ನ್ಯಾಯ ಸಮ್ಮತವಾದ ಬೇಡಿಕೆ ಈಡೇರಿಸಬೇಕು ಎಂದು ಜಿಲ್ಲೆಯಲ್ಲಿ ಲಿಂಗಪೂಜೆ ಮೂಲಕ ಸರ್ಕಾರಕ್ಕೆ ಒತ್ತಾಯಿಸೋಣ ಎಂದರು.

ಗಜೇಂದ್ರಗಡ–ಉಣಚಗೇರಿ ಪಂಚಮಸಾಲಿ ಸಮಾಜದ ಅಧ್ಯಕ್ಷ ಸಿದ್ದಪ್ಪ ಬಂಡಿ ಮಾತನಾಡಿದರು.

ಟಿ.ಎಸ್ ರಾಜೂರ, ಈಶಣ್ಣ ಮ್ಯಾಗೇರಿ, ಚಂಬಣ್ಣ ಚವಡಿ, ಕಳಕಪ್ಪ ಸಂಗನಾಳ, ಸುಭಾಸ ಮ್ಯಾಗೇರಿ, ಮುತ್ತಣ್ಣ ಮ್ಯಾಗೇರಿ, ವೀರೇಶ ಸಂಗಮದ, ಈರಣ್ಣ ಪಲ್ಲೇದ ಮುಂತಾದವರು ಇದ್ದರು.

> ಕಾಂಗ್ರೆಸ್ ಸರ್ಕಾರವು ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಬಳಿಕ ಹಾಲುಮತ ಎಸ್‌ಟಿ ಹಾಗೂ ಕುಂಚಿಟಿಗ ಸಮುದಾಯವನ್ನು ಕೇಂದ್ರದ ಓಬಿಸಿ ಪಟ್ಟಿಗೆ ಸೇರಿಸಲು ಸಿಎಂ ಸಿದ್ದರಾಮಯ್ಯ ಅವರ ಸರ್ಕಾರ ಶಿಫಾರಸ್ಸು ಮಾಡಿದ್ದು ಖುಷಿ ತಂದಿದೆ. ನಮಗೂ ಸಹ ರಾಜ್ಯದಲ್ಲಿ 2ಎ ಹಾಗೂ ಕೇಂದ್ರದಲ್ಲಿ ಒಬಿಸಿಗೆ ಸೇರಿಸುವಂತೆ ಒತ್ತಾಯಿಸುತ್ತಿದ್ದೇವೆ ಹೊರತು ನಾವು ಯಾರ ವಿರುದ್ಧ ಅಥವಾ ಮತ್ತೊಬ್ಬರ ಹಕ್ಕನ್ನು ಕಸಿದಿಕೊಳ್ಳಲು ಹೋರಾಟವನ್ನು ನಡೆಸುತ್ತಿಲ್ಲ. ರಾಜ್ಯ ಸರ್ಕಾರದಲ್ಲಿ ಇಬ್ಬರು ಮಂತ್ರಿಗಳು ಸೇರಿ 11 ಜನ ಶಾಸಕರು ವಿಧಾನ ಸಭೆಯಲ್ಲಿ ಗುಡುಗಿದರೆ ನಮ್ಮ ಬೇಡಿಕೆ ನೂರಕ್ಕೆ ನೂರರಷ್ಟು ಈಡೇರಲಿದೆ ಎನ್ನುವ ವಿಶ್ವಾಸವಿದೆ.
>
> – ಬಸವಜಯ ಮೃತ್ಯುಂಜಯ ಸ್ವಾಮೀಜಿ.

## ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ 5ನೇ ಪುಣ್ಯಸ್ಮರಣೆ, ಪ್ರಶಸ್ತಿ ಪ್ರದಾನ, ಗ್ರಂಥಬಿಡುಗಡೆ ಕಾರ್ಯಕ್ರಮ

# ಸಿದ್ಧಲಿಂಗ ಶ್ರೀಗಳು ಕೋಮು ಸೌಹಾರ್ದತೆಯ ಪ್ರಖರ ಪ್ರತಿಪಾದಕರು



■ವಿಜಯಸಾಕ್ಷಿ ಸುದ್ದಿ, ಗದಗ

ಕೋಮು ದ್ವೇಷ ಹೆಚ್ಚುತ್ತಿರುವ ವಿಷಮ ಘಳಿಗೆಯಲ್ಲೂ ಏಕತೆ-ಭ್ರಾತೃತ್ವತೆ ತತ್ವಗಳ ಜಾರಿಗೆ ದಿಟ್ಟ ಹೆಜ್ಜೆಗಳನ್ನಿಟ್ಟ ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಕೋಮು ಸೌಹಾರ್ದತೆಯ ಪ್ರಖರ ಪ್ರತಿಪಾದಕರಾಗಿದ್ದರು ಎಂದು ನಿವೃತ್ತ ಐಎಎಸ್ ಅಧಿಕಾರಿ, ಜಾಗತಿಕ ಲಿಂಗಾಯತ ಮಹಾಸಭಾದ ಮಹಾ ಪ್ರಧಾನ ಕಾರ್ಯದರ್ಶಿ ಡಾ. ಎಸ್.ಎಂ ಜಾಮದಾರ ಅಭಿಪ್ರಾಯಪಟ್ಟರು.

ಬುಧವಾರ ನಗರದ ತೋಂಟ-ದಾರ್ಯ ಮಠದಲ್ಲಿ ಜರುಗಿದ ಲಿಂ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ 5ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ 'ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದರು.

ನನ್ನ ಜೀವನದಲ್ಲಿ ಇದೊಂದು ಭಾವನಾತ್ಮಕ ಕಾರ್ಯಕ್ರಮ. ಲಿಂಗೈಕ್ಯ ಗುರುಗಳೊಂದಿಗೆ ಎರಡು ದಶಕಗಳಿಂದ ಆಪ್ತ ಸಂಬಂಧ ಇರಿಸಿಕೊಂಡಿದ್ದ ನಾನು ಅವರಿಂದ ಪ್ರೇರಣೆಗೆ ಒಳಗಾಗಿದ್ದೆ. 1998ರಲ್ಲಿ ಇದೇ ವೇದಿಕೆಯಲ್ಲಿ ಜರುಗಿದ ತೋಂಟದಾರ್ಯ ಜಾತ್ರಾ ಕಾರ್ಯಕ್ರಮಕ್ಕೆ ನಾನು ಅತಿಥಿಯಾಗಿ ಬಂದಿದ್ದೆ. ಆ ಸಂದರ್ಭದಲ್ಲಿ ಶ್ರೀಗಳ ಆಶೀರ್ವಚನ ನೀಡುತ್ತಾ ಸನ್ಯಾಸ ಜೀವನದ ಏಕತಾನತೆಯನ್ನು ಹೋಗಲಾಡಿಸುವುದಕ್ಕೆ ನಾನು ಸಮಾಜಮುಖಿಯಾದೆ ಎಂದಿದ್ದು ನನ್ನನ್ನು ಪ್ರಭಾವಗೊಳಿಸಿತು.

ಕೂಡಲಸಂಗಮದ ಬಸವೇಶ್ವರ ಐಕ್ಯ ಮಂಟಪವನ್ನು ರೋಮನ್, ಗ್ರೀಕ್, ಇಸ್ಲಾಮಿಕ್, ಹಿಂದೂ ಶೈಲಿಯಲ್ಲಿ ನಿರ್ಮಿಸಬೇಕೆಂಬ ನನ್ನ ಆಶಯವನ್ನು ಅವರು ಬಹುವಾಗಿ ಮೆಚ್ಚಿಕೊಂಡಿದ್ದರು. ಅಲ್ಲದೇ ಆ ಕಾಲದಲ್ಲಿ ಪೂಜ್ಯರು ಹಾಗೂ ಇಲಕಲ್ಲ ಶ್ರೀಗಳು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ಸಾಕಷ್ಟು ಮಾರ್ಗದರ್ಶನ ನೀಡಿದರು. ಚರಿತ್ರೆಯ ಕುರಿತು ಅಪಾರ ಆಸಕ್ತಿ ಹೊಂದಿದ್ದ ಶ್ರೀಗಳು ಬಸವತತ್ವವನ್ನು ಕೇವಲ ನುಡಿಯದೇ ಆಚರಣೆಗೆ ತಂದಿದ್ದರು. ಇಂಥ ಮಹಾತ್ಮರ ಹೆಸರಿನಲ್ಲಿ ಪಡೆದ ಪ್ರಶಸ್ತಿಯನ್ನು ಸಂತೋಷದಿಂದ ಸ್ವೀಕರಿಸಿ ಪ್ರಶಸ್ತಿ ಮೊತ್ತವನ್ನ ಪೂಜ್ಯರ ಆಶಯದಂತೆ ವಿನಿಯೋಗಿಸಲು ಮರಳಿ ಸಲ್ಲಿಸುತ್ತೇನೆ ಎಂದರು.

ಪ್ರಶಸ್ತಿ ಪ್ರದಾನ ಮಾಡಿದ ಕರ್ನಾಟಕ ಸರ್ಕಾರದ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರಾದ ಎಚ್.ಕೆ ಪಾಟೀಲ ಮಾತನಾಡಿ, ತೋಂಟದ ಸಿದ್ಧಲಿಂಗ ಶ್ರೀಗಳ ಹೆಸರಿನಲ್ಲಿ ಸಾಧಕರಿಗೆ ಪ್ರಶಸ್ತಿ ನೀಡುತ್ತಿರುವ ಕಾರ್ಯ ಶ್ಲಾಘನೀಯ. ಈ ಬಾರಿ ಎಸ್.ಎಂ ಜಾಮದಾರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿರುವುದು ಪ್ರಶಸ್ತಿಯ ಗೌರವವನ್ನು ಹೆಚ್ಚಿಸಿದೆ. ತೋಂಟದ ಸಿದ್ಧಲಿಂಗ ಶ್ರೀಗಳಿಗೆ ಬಸವತತ್ವ ಸಿದ್ಧಾಂತ ವ್ಯಾಪಕವಾಗಿ ಅನುಷ್ಠಾನವಾಗದಿದ್ದ ಕುರಿತು ಅಪಾರ ನೋವಿತ್ತು. ಈ ಹಿನ್ನೆಲೆಯಲ್ಲಿ ಅವರು ಬಸವತತ್ವ ಪ್ರಸಾರಕ್ಕೆ ಪ್ರಾಶಸ್ತ್ಯ ನೀಡಿದ್ದರು ಎಂದರು.

ಘನ ಉಪಸ್ಥಿತಿ ವಹಿಸಿದ್ದ ವಿ.ಪ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ನನ್ನ ಹಾಗೂ ಸಿದ್ಧಲಿಂಗ ಶ್ರೀಗಳದ್ದು ಸುಮಾರು 4 ದಶಕಗಳ ಸುದೀರ್ಘ ಒಡನಾಟ. ಈ ರಾಜ್ಯದಲ್ಲಿ ನೂರಕ್ಕೆ ನೂರರಷ್ಟು ಬಸವತತ್ವ ಪಾಲಿಸಿದ ಏಕೈಕ ಶ್ರೀಗಳೆಂದರೆ ಅದು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಗಳು. ಎಲ್ಲರೂ ಪ್ರವಾಹದೊಂದಿಗೆ ಹೋಗುತ್ತಾರೆ. ಆದರೆ ಅವರು ಪ್ರವಾಹದ ವಿರುದ್ಧ ಈಜುತ್ತಿದ್ದರು. ದಕ್ಷ-ಪ್ರಾಮಾಣಿಕ ಅಧಿಕಾರಿಗಳಾಗಿರುವ ಜಾಮದಾರರಂಥವರು ವಿರಳಾತಿ ವಿರಳ. ಇಂಥವರಿಗೆ ತೋಂಟದ ಸಿದ್ಧಲಿಂಗ ಶ್ರೀಗಳ ಹೆಸರಿನಲ್ಲಿ ಪ್ರಶಸ್ತಿ ನೀಡಿರುವುದು ಅತ್ಯಂತ ಸೂಕ್ತವಾಗಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಮುಂಡರಗಿ-ಬೈಲೂರು ತೋಂಟದಾರ್ಯ ಶಾಖಾಮಠದ ನಿಜಗುಣಪ್ರಭು ತೋಂಟದಾರ್ಯ ಮಹಾಸ್ವಾಮಿಗಳು, ಆಳಂದ ಅನುಭವ ಮಂಟಪದ ಕೋರಣೇಶ್ವರ ಮಹಾಸ್ವಾಮಿಗಳು, ಭೈರನಹಟ್ಟಿ ದೊರೆಸ್ವಾಮಿ ವಿರಕ್ತಮಠದ ಶಾಂತಲಿಂಗ ಮಹಾಸ್ವಾಮಿಗಳು, ಶಿರೋಳ ತೋಂಟದಾರ್ಯಮಠದ ಗುರುಬಸವ ಮಹಾಸ್ವಾಮಿಗಳು, ಮಾಜಿ ಸಚಿವ ಎಸ್.ಎಸ್ ಪಾಟೀಲ, ಮಾಜಿ ಸಂಸದ ಐ.ಜಿ ಸನದಿ, ಮಾಜಿ ಶಾಸಕರಾದ ಡಿ.ಆರ್ ಪಾಟೀಲ, ರಾಮಕೃಷ್ಣ ದೊಡ್ಡಮನಿ, ಖ್ಯಾತ ಮನೋವೈದ್ಯ ಆನಂದ ಪಾಂಡುರಂಗಿ, ಕೃಷಿ ತಜ್ಞ ನಡಕಟ್ಟಿನ ಮುಂತಾದವರಿದ್ದರು.

ತೋಂಟದಾರ್ಯ ಮಠದ ಆಡಳಿತಾಧಿಕಾರಿ ಎಸ್.ಎಸ್ ಪಟ್ಟಣಶೆಟ್ಟರ ಸ್ವಾಗತಿಸಿದರು. ವಿವೇಕಾನಂದಗೌಡ ಪಾಟೀಲ ಹಾಗೂ ವೀರನಗೌಡ ಮರಿಗೌಡ್ರ ನಿರೂಪಿಸಿದರು.

> ನಮ್ಮ ದೇಶದ ಸಂವಿಧಾನದ ಎಲ್ಲ ಅಂಶಗಳನ್ನು ಬಸವ ತತ್ವ ಒಳಗೊಂಡಿದ್ದು, ಇಂಥ ಶ್ರೇಷ್ಠ ತತ್ವ ಅಶಕ್ತವಾಗಲು ನಾವು ಅವಕಾಶ ಮಾಡಿಕೊಡಬಾರದು. ಸಿದ್ಧಲಿಂಗ ಶ್ರೀಗಳು ಕೇವಲ ಮಠಕ್ಕೆ ಸೀಮಿತರಾಗದೇ ಜನಪರ ಹೋರಾಟಗಳಲ್ಲಿ ಭಾಗವಹಿಸಿದರು. ಗೋಕಾಕ್ ಚಳುವಳಿಗೆ ಸಿದ್ಧಲಿಂಗ ಶ್ರೀಗಳ ನೇತೃತ್ವದಿಂದ ಬಲ ಬಂದಿದ್ದನ್ನು ಹಾಗೂ ಶ್ರೀಗಳ ಹೋರಾಟದಿಂದ ಕಪ್ಪತಗುಡ್ಡ ಗಣಿಗಾರಿಕೆಯಿಂದ ಮುಕ್ತವಾಗಿದ್ದನ್ನು ನಾವು ಮರೆಯುವಂತಿಲ್ಲ. ಸದ್ಯದ ತೋಂಟದ ಸಿದ್ಧರಾಮ ಶ್ರೀಗಳು ಸಹ ಲಿಂಗೈಕ್ಯ ಗುರುಗಳ ಪುಸ್ತಕ ಸಂಸ್ಕೃತಿಯನ್ನು ಪೋಷಿಸಿಕೊಂಡು ಹೋಗುತ್ತಿರುವುದಲ್ಲದೇ ಸ್ವತಃ ಅವರೂ ಶ್ರೇಷ್ಠ ವಿದ್ವತ್ತುಳ್ಳವರು ಎಂಬುದು ಅಭಿಮಾನದ ಸಂಗತಿ.
>
> **– ಎಚ್.ಕೆ ಪಾಟೀಲ.**
> ಜಿಲ್ಲಾ ಉಸ್ತುವಾರಿ ಸಚಿವರು.

ತೋಂಟದ ಶ್ರೀಗಳ ಕುರಿತಾದ ಭೋಜರಾಜ ಸೊಪ್ಪಿಮಠ ಸಂಪಾದಿಸಿದ 'ಕರುಣಾಮಯಿ', ಬಸವರಾಜಪ್ಪ ಶರಣರು ವೆಂಕಟಾಪೂರ ಬರೆದ 'ಮಾತೃಹೃದಯಿ', ಡಾ.ರಾಜಶೇಖರ ಜಮದಂಡಿ ರಚಿಸಿದ 'ವಚನ ಸಾಹಿತ್ಯ ಅಧ್ಯಯನಗಳ ಸಮೀಕ್ಷೆ', ಪ್ರೊ.ಶಂಕರಗೌಡ ಬಿರಾದಾರ ರಚಿಸಿದ 'ಲಿಂಗಾಯತ ಧರ್ಮದ ತತ್ವ ಸಿದ್ಧಾಂತ', ಡಾ.ರಮೇಶ ಕಲ್ಲನಗೌಡರ ರಚಿಸಿದ 'ಕನ್ನಡ ಸಾಹಿತ್ಯದಲ್ಲಿ ಸತ್ಯೇಂದ್ರ ಚೋಳ' ಗ್ರಂಥಗಳು ಬಿಡುಗಡೆಗೊಂಡವು.

## ಜಿಲ್ಲಾಡಳಿತ ಭವನದಲ್ಲಿ ವೀರರಾಣಿ ಕಿತ್ತೂರು ಚನ್ನಮ್ಮ ಜಯಂತಿ



■ವಿಜಯಸಾಕ್ಷಿ ಸುದ್ದಿ, ಗದಗ

ಕಿತ್ತೂರು ಚನ್ನಮ್ಮ ಅವರು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಅವಿರತವಾಗಿ ಹೋರಾಟ ನಡೆಸಿದರು. ಅದಕ್ಕಾಗಿಯೇ ಅವರನ್ನು ವೀರರಾಣಿ, ಸ್ವಾತಂತ್ರ್ಯದ ಬೆಳ್ಳಿ ಚುಕ್ಕಿ, ಕಿತ್ತೂರು ಚೆನ್ನಮ್ಮ ಎಂದು ಕರೆಯುತ್ತಾರೆ. ಅವರ ಹೋರಾಟ, ತ್ಯಾಗ, ಬಲಿದಾನವನ್ನು ನಾವೆಲ್ಲಾ ಮರೆಯಬಾರದು ಎಂದು ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ನುಡಿದರು.

ನಗರದ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಪ್ರತಿ ವರ್ಷದಂತೆ ಈ ವರ್ಷವೂ ಸಹ ಸರ್ಕಾರದಿಂದ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿ ಆಚರಿಸಲಾಗುತ್ತಿದೆ. ಈ ವರ್ಷ ಭೀಕರ ಬರಗಾಲದ ಹಿನ್ನೆಲೆಯಲ್ಲಿ ರೈತ ಸಮುದಾಯ ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದೆ. ಜಯಂತಿ ಆಚರಣೆಯ ಅನುದಾನ ರೈತರಿಗೆ ಸಹಾಯವಾಗಲಿ ಎಂದು ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡುವ ಬಗ್ಗೆ ಕಿತ್ತೂರಾಣಿ ಚೆನ್ನಮ್ಮ ಅಭಿಮಾನಿಗಳು ಹಾಗೂ ಸಮುದಾಯಗಳು ನಿರ್ಣಯ ಕೈಗೊಂಡಿರುವುದು ಉತ್ತಮ ನಿರ್ಧಾರವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಎಸ್.ವಿ ಸಂಕನೂರ್, ಮಾಜಿ ಶಾಸಕ ಡಿ.ಆರ್ ಪಾಟೀಲ್, ನಗರಸಭೆ ಅಧ್ಯಕ್ಷೆ ಉಷಾ ಮಹೇಶ್ ದಾಸರ, ಜಿಲ್ಲಾಧಿಕಾರಿ ವೈಶಾಲಿ ಎಂಎಲ್, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಉಪ ವಿಭಾಗಾಧಿಕಾರಿ ವೆಂಕಟೇಶ್ ನಾಯಕ್, ಗಣ್ಯರಾದ ಸಿದ್ದು ಪಲ್ಲೇದ, ಎಮ್.ಎಸ್ ಕರಿಗೌಡ್ರ ಸೇರಿದಂತೆ ಸಮುದಾಯದ ಹಿರಿಯರು ಹಾಜರಿದ್ದರು.



ಗದುಗಿನ ಶ್ರೀ ಗಾನಯೋಗಿ ಪಂಚಾಕ್ಷರಿ ಗವಾಯಿಗಳವರ ಮಾರುಕಟ್ಟೆ ಪ್ರಾಂಗಣ, ಎಪಿಎಂಸಿ ಯಾರ್ಡ್ ನಲ್ಲಿ ನೂತನವಾಗಿ ಪ್ರಾರಂಭಿಸಿದ ಶ್ರೀರಾಮ ಟ್ರೇಡರ್ಸ್ ಒಣಮೆಣಸಿಕಾಯಿ ದಲಾಲಿ ಅಂಗಡಿಗೆ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾಲೀಕರಾದ ರಾಜಣ್ಣ ಮೂಲಿಮನಿ, ತಿಮ್ಮಣ್ಣ ಕೊನರಡ್ಡಿ, ಮಹಾಲಿಂಗಯ್ಯ ಹಿರೇಮಠ, ಮಂಜುನಾಥ್ ಸಂಗಟಿ, ಪ್ರಭು ಬುರಬುರೆ, ಬಿ.ಬಿ ಅಸೂಟಿ, ಜಿ.ಪಂ ಮಾಜಿ ಅಧ್ಯಕ್ಷ ಸಿದ್ಧು ಪಾಟೀಲ, ಪ್ರಕಾಶ ಖೋಡೆ, ಅಶೋಕ ಗಡಾದ, ಮುತ್ತು ಕುಟಗುಂಟಿ, ಮಲ್ಲಣ್ಣ ಸಂಗಟಿ, ಶಿವಣ್ಣ ನವಲಗುಂದ ಮುಂತಾದವರಿದ್ದರು.

## ಕನ್ನಡ ಜನಾಭಿವೃದ್ಧಿ ವೇದಿಕೆಯ ತಾಲೂಕಾಧ್ಯಕ್ಷರ ನೇಮಕ

■ವಿಜಯಸಾಕ್ಷಿ ಸುದ್ದಿ, ಗದಗ

ಕನ್ನಡ ಜನಾಭಿವೃದ್ಧಿ ವೇದಿಕೆಯ ಜಿಲ್ಲಾಧ್ಯಕ್ಷ ಗಣೇಶ ಹಾತಲಗೇರಿ ಮಾರ್ಗದರ್ಶನದದಲ್ಲಿ ಮುಂಡರಗಿ ತಾಲೂಕಾಧ್ಯಕ್ಷರಾಗಿ ಸುಭಾಷ ವೆಂಕಪ್ಪ ಕಿತ್ತೂರ ಇವರನ್ನು ನೇಮಕ ಮಾಡಲಾಗಿದೆ.

ವೇದಿಕೆಯ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ಕನ್ನಡ ಜನಾಭಿವೃದ್ಧಿ ವೇದಿಕೆಯನ್ನು ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೂ ಸಂಘಟಿಸಿ ವೇದಿಕೆಯ ಬಲವರ್ಧನೆಗೆ ಶ್ರಮಿಸುವಂತೆ, ಎಲ್ಲಾ ಘಟಕದ ಪದಾಧಿಕಾರಿಗ ಮಾರ್ಗದರ್ಶನ ಪಡೆದು ವೇದಿಕೆಯನ್ನು ಸಂಘಟನೆಯನ್ನು ಬಲಪಡಿಸುವಂತೆ ಸೂಚಿಸಲಾಗಿದೆ ಎಂದು ಗದಗ ಜಿಲ್ಲಾಧ್ಯಕ್ಷ ಗಣೇಶ ಹಾತಲಗೇರಿ ಪತ್ರಿಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




## ಅತಿಥಿಗಳಿಗೆ ಪುಸ್ತಕ, ಸಸಿಗಳನ್ನು ವಿತರಿಸಿ: ನಾಗರಾಜ.ಕೆ



■ವಿಜಯಸಾಕ್ಷಿ ಸುದ್ದಿ, ರೋಣ

ತಾಲೂಕಿನಲ್ಲಿ ಜರುಗುವ ಸರಕಾರಿ ಕಾರ್ಯಕ್ರಮಗಳಲ್ಲಿ ಇನ್ನುಮುಂದೆ ಯಾವುದೇ ಕಾರಣಕ್ಕೂ ಹೂ ಮಾಲೆಗಳನ್ನು ಬಳಸಬಾರದು ಎಂದು ತಹಸೀಲ್ದಾರ ನಾಗರಾಜ ಕೆ. ಅಧಿಕಾರಿಗಳಿಗೆ ಸೂಚನೆ ನಿಡಿದರು.

ಅವರು ಬುಧವಾರ ತಹಸೀಲ್ದಾರ ಕಚೇರಿಯ ಸಭಾಂಗಣದಲ್ಲಿ ಜರುಗಿದ ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸರಕಾರಿ ಕಾರ್ಯಕ್ರಮಗಳಲ್ಲಿ ಹೂ ಮಾಲೆಗಳನ್ನು ಬಳಸುವುದರಿಂದ ಯಾವುದೇ ರಿತಿಯ ಪ್ರಯೋಜನವಿಲ್ಲ. ಬದಲಾಗಿ ಕಾರ್ಯಕ್ರಮಕ್ಕೆ ಬಂದ ಅಥಿತಿಗಳಿಗೆ ಪುಸ್ತಕ ಹಾಗೂ ಸಸಿಗಳನ್ನು ವಿತರಿಸುವ ಕಾರ್ಯವಾಗಬೇಕು. ಅಂದಾಗ ಜ್ಞಾನವೂ ಬೆಳೆಯುತ್ತದೆ, ಹಸಿರೂ ಉಳಿಯುತ್ತದೆ ಎಂದರು.

ನ.1ರಂದು ನಡೆಯುವ ಕನ್ನಡ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ತಾಲೂಕ ಮಟ್ಟದ ಎಲ್ಲ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಗಳು ಪಣ ತೊಡಬೇಕು. ತಾಲೂಕಿನ ಎಲ್ಲ ಸರಕಾರಿ ಕಟ್ಟಡಗಳನ್ನು ವಿದ್ಯುತ್ ದೀಪಗಳಿಂದ ಸಿಂಗರಿಸಬೇಕು. ಸಮಯಕ್ಕೆ ಸರಿಯಾಗಿ ಧ್ವಜಾರೋಹಣ ಕಾರ್ಯವನ್ನು ನಡೆಸಬೇಕಲ್ಲದೆ, ಕನ್ನಡಾಂಬೆಯ ಮೆರವಣಿಗೆಯಲ್ಲಿ ಕಡ್ಡಾಯವಾಗಿ ಎಲ್ಲರೂ ಭಾಗಿಯಾಗಬೇಕು. ಶಾಲಾ ಮಕ್ಕಳಿಗೆ ತೊಂದರೆಯಾಗದಂತೆ ಮೆರವಣಿಗೆ ನಡೆಯಬೇಕು. ತಾಲೂಕಿನ ಎಲ್ಲ ಶಾಲೆಗಳಲ್ಲಿ ಕನ್ನಡದ ಬಗ್ಗೆ ಪ್ರಬಂಧ, ಭಾಷಣ ಸ್ಪರ್ಧೆಗಳನ್ನು ಕಡ್ಡಾಯವಾಗಿ ಏರ್ಪಡಿಸಬೇಕು. ಸ್ಪರ್ಧೆಗಳಲ್ಲಿ ಆಯ್ಕೆಯಾದ ತಲಾ ಮೂರು ಮಕ್ಕಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಬೇಕು. ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಗುರುತಿಸಿ ಸತ್ಕರಿಸಬೇಕು ಎಂದು ಸೂಚಿಸಿದರು.

ಅಧಿಕಾರಿಗಳಾದ ರವಿ ಎ.ಎನ್, ಜಗದೀಶ ಮಡಿವಾಳರ, ಜೆ.ಟಿ ಕೊಪ್ಪದ, ಬಸವರಾಜ ಅಂಗಡಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ವೆಂಕಟೇಶ್ವರ ದೇವಸ್ಥಾನದಲ್ಲಿ ರಥೋತ್ಸವ ಸಂಪನ್ನ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಹಿರೇಬಣದಲ್ಲಿರುವ ವೆಂಕಟೇಶ್ವರ ದೇವಸ್ಥಾನದ ರಥೋತ್ಸವ ವೈಭವದಿಂದ ನೆರವೇರಿತು. ನಿತ್ಯ ಕಾಕಡಾರತಿ, ಭಜನೆ, ಉಪನ್ಯಾಸ, ವಿಶೇಷ ಪೂಜೆ, ಸಂಜೆ ವಿವಿಧ ವಾಹನಗಳ ಮೇಲೆ ವೆಂಕಟೇಶ್ವರ ಉತ್ಸವ ಮೂರ್ತಿಯ ಮೆರವಣಿಗೆಯು ಸಂಪ್ರದಾಯದಂತೆ ಜರುಗಿತು.

ನೂರಾರು ವಿಪ್ರಬಾಂಧವರು, ವಿವಿಧ ಸಮಾಜದ ಸಾರ್ವಜನಿಕರು ರಥೋತ್ಸವವದಲ್ಲಿ ಪಾಲ್ಗೊಂಡಿದ್ದರು. ನಂತರ ದೇವಸ್ಥಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ದೇವಸ್ಥಾನದ ಅರ್ಚಕ ವೆಂಕಟೇಶ ಗುಡಿ ಅವರು ವಿಜಯದಶಮಿಯ ಮಹತ್ವವನ್ನು ವಿವರಿಸಿದರು.

ಈ ವೇಳೆ ಶ್ರೀಪಾದರಾಜ ಹೊಂಬಳ, ವ್ಹಿ.ಎಲ್ ಪೂಜಾರ, ನಾರಾಯಣಭಟ್ ಪುರಾಣಿಕ, ಗೋಪಾಲ ಪಡ್ನೀಸ್, ಕೃಷ್ಣ ಕುಲಕರ್ಣಿ, ಕೆ.ಎಸ್ ಕುಲಕರ್ಣಿ, ಎ.ಪಿ ಕುಲಕರ್ಣಿ, ದತ್ತಾತ್ರೇಯ ದೇಶಪಾಂಡೆ, ವರದೇಂದ್ರ ಪುರೋಹಿತ, ಶ್ರೀನಿವಾಸ ಹುಲಮನಿ, ರಾಜಾಚಾರ್ಯ ರಾಯಚೂರ, ಆರ್.ಎನ್ ಪಂಚಬಾವಿ, ಶ್ರೀಕಾಂತ ಪೂಜಾರ, ಗುರುರಾಜ ಪಾಟೀಲಕುಲಕರ್ಣಿ, ರಮೇಶ ತೊರಗಲ್, ಕೃಷ್ಣಮೂರ್ತಿ ಕುಲಕರ್ಣಿ, ಅನಿಲ ಕುಲಕರ್ಣಿ, ಚಿಕ್ಕಣ್ಣ ಪೂಜಾರ, ಅನಂತ ತೇಲಂಗ, ಎಸ್.ಎಚ್ ಬೆಟಗೇರಿ, ವ್ಯಾಪಾರಿ, ತಂತ್ರಿ, ಮಂಜುನಾಥ ಒಂಟಿ, ಡಾ.ಪ್ರಸನ್ನ ಕುಲಕರ್ಣಿ, ಡಿ.ಪಿ ಹೇಮಾದ್ರಿ, ಅರವಿಂದ ದೇಶಪಾಂಡೆ, ನಿಂಗಪ್ಪ ತಹಸೀಲ್ದಾರ ಮುಂತಾದವರು ಪಾಲ್ಗೊಂಡಿದ್ದರು.

## ಕರ್ನಾಟಕ ನಾಮಕರಣ ಸಂಭ್ರಮಾಚರಣೆ: ಸಚಿವರಿಂದ ಸ್ಥಳ ಪರಿಶೀಲನೆ



■ವಿಜಯಸಾಕ್ಷಿ ಸುದ್ದಿ, ಗದಗ

ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರು ನಾಮಕರಣವಾಗಿ 50 ವರ್ಷ ತುಂಬಿದ ಹಿನ್ನೆಲೆಯಲ್ಲಿ ಸಂಭ್ರಮಾಚರಣೆ ಕಾರ್ಯಕ್ರಮವನ್ನು ನವೆಂಬರ್ 2ರಿಂದ ವರ್ಷಪೂರ್ತಿ ರಾಜ್ಯಾದ್ಯಂತ ಆಚರಿಸಲಾಗುತ್ತಿದೆ. ನ.3ರಂದು ಗದಗ ನಗರದಲ್ಲಿ ಸಂಭ್ರಮಾಚರಣೆ ಕಾರ್ಯಕ್ರಮ ಜರುಗಲಿದ್ದು, ಸಂಭ್ರಮಾಚರಣೆಯ ವೇದಿಕೆ ಕಾರ್ಯಕ್ರಮದ ಸ್ಥಳವನ್ನು ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಪರಿಶೀಲಿಸಿದರು.


ಗದುಗಿನಲ್ಲಿ ಸಂಭ್ರಮಾಚರಣೆ ಅದ್ದೂರಿಯಿಂದ ಜರುಗಬೇಕು. ಅದಕ್ಕಾಗಿ ಅಗತ್ಯವಿರುವ ಎಲ್ಲಾ ಪೂರ್ವ ಸಿದ್ಧತೆಗಳನ್ನು ಅಧಿಕಾರಿಗಳು ಮಾಡಿಕೊಳ್ಳುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸೂಚಿಸಿದರು. ನ.3ರಂದು ಬೆಳಗ್ಗೆ ಗದಗಿನ ವೀರನಾರಾಯಣ ದೇವಸ್ಥಾನದಿಂದ ಮೆರವಣಿಗೆ ಆರಂಭವಾಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕನ್ನಡ ಜ್ಯೋತಿ ಸ್ವಾಗತಿಸಿ, ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ.

ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ್ ತಂಗಡಗಿ ಸೇರಿದಂತೆ ಇತರೆ ಗಣ್ಯರು ಆಗಮಿಸುವರು. ಶಿಷ್ಟಾಚಾರದ ಅನ್ವಯ ಕಾರ್ಯಕ್ರಮ ಅರ್ಥಪೂರ್ಣವಾಗಿ ಜರಗಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ, ನಗರಸಭೆ ಪೌರಾಯುಕ್ತ ಗಂಗಪ್ಪ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಾರುತಿ ಬ್ಯಾಕೋಡ್, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ರಮೇಶ್ ಪಾಟಿಲ, ನಿರ್ಮಿತಿ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕ ಗಂಗಾಧರ್ ಶಿರೋಳ್, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರಪ್ಪ ವಿಭೂತಿ, ವಾರ್ತಾಧಿಕಾರಿ ವಸಂತ ಮಡ್ಲೂರು, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶರಣು ಗೋಗೇರಿ ಸೇರಿದಂತೆ ಗಣರಾದ ಪ್ರಭು ಬುರಬುರೆ, ಸಿದ್ದು ಪಾಟೀಲ್, ಬಿ.ಬಿ ಅಸೂಟಿ ಉಪಸ್ಥಿತರಿದ್ದರು.

## ತಾಲೂಕಿನಾದ್ಯಾಂತ ಸಂಭ್ರಮದ ದಸರಾ ಆಚರಣೆ





'ವಿಜಯ ದಶಮಿ ಹಬ್ಬವು ಸರ್ವರ ಬಾಳಿನಲ್ಲಿ ಸುಖ-ಶಾಂತಿಯನ್ನು ಕರುಣಿಸಲಿ, ಸರ್ವರೂ ಏಕತೆಯ ಮನೋಭಾವನೆಯಿಂದ ಬಾಳುವ ಶಕ್ತಿಯನ್ನು ನೀಡಲಿ, ನಾಡಿಗೆ ಆವರಿಸಿರುವ ಬರಗಾಲ ಸರಿದು ಉತ್ತಮ ಮಳೆಯಾಗಿ ನಾಡಿನದಲ್ಲಿ ಹಸಿರು ಕಂಗೊಳಿಸಲಿ' ಎಂದು ಶಾಸಕ ಜಿ.ಎಸ್ ಪಾಟೀಲರು ಕ್ಷೇತ್ರದ ಜನರಿಗೆ ದಸರಾ ಹಬ್ಬದ ಶುಭಾಶಯಗಳನ್ನು ಕೋರಿದರು.

■ವಿಜಯಸಾಕ್ಷಿ ಸುದ್ದಿ, ರೋಣ

ತಾಲೂಕಿನಾದ್ಯಾಂತ ದಸರಾ ಹಬ್ಬವು ಅತ್ಯಂತ ಸಂಭ್ರಮ ಹಾಗೂ ಸಡಗರದಿಂದ ನಡೆಯಿತು.

ಹಿಂದು ಮುಸ್ಲಿಂ ಭಾವೈಕ್ಯತೆಯ ಮಾರನಬಸರಿ ಗ್ರಾಮದಲ್ಲಿ ದಸರಾ ಹಬ್ಬವನ್ನು ವಿಶಿಷ್ಟ ರಿತಿಯಲ್ಲಿ ಆಚರಿಸಲಾಯಿತು. ಗ್ರಾಮದ ಆದಿ ದೇವತೆಗಳಾದ ಕಾಳಿಕಾದೇವಿ ಮತ್ತು ದುರ್ಗಾ ದೇವಿ ದೇವಸ್ಥಾನಗಳನ್ನು ವಿದ್ಯುತ್ ದೀಪಾಲಂಕಾರಗಳಿಂದ ಸಿಂಗರಿಸಲಾಗಿತ್ತು.

ಕಾಳಿಕಾದೇವಿ, ದುರ್ಗಾದೇವಿಯ ಪಲ್ಲಕ್ಕಿ ಉತ್ಸವ ಸಂಭ್ರಮದಿಂದ ನೆರವೇರಿತು.

ಗ್ರಾಮದ ಕಾಳಿಕಾದೇವಿ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ದೇವಿ ಮಹಾತ್ಮೆ ಪುರಾಣ ಪ್ರವಚನ ಧಾರ್ಮಿಕ ಕಾರ್ಯ ಸಂಪನ್ನಗೊಂಡಿತು. ಗ್ರಾಮ ದೇವತೆಗೆ ಭಕ್ತರು ವಿಶೇಷ ಪೂಜಾ ಕಾರ್ಯಗಳನ್ನು ನೆರವೇರಿಸುವ ಮೂಲಕ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಹಬ್ಬದ ನಿಮಿತ್ತ ತ್ರ್ಯಂಬಕೇಶ್ವರ, ಮಹರ್ಷಿ ವಾಲ್ಮೀಕಿ, ಮಾರುತೇಶ್ವರ, ಕಲ್ಲಯ್ಯಜ್ಜ, ಬಸವೇಶ್ವರ, ರೇವಣಸಿದ್ದೇಶ್ವರ, ಭಾವಿ ಮಾರುತೇಶ್ವರ, ಹುಚ್ಚೀರೇಶ್ವರ ದೇವಸ್ಥಾನಗಳಲ್ಲಿ ಪೂಜಾ ಕಾರ್ಯಗಳು ಜರುಗಿದವು.



ಮುಂಡರಗಿ ಪಟ್ಟಣದ ತಹಸೀಲ್ದಾರ್ ಕಚೇರಿ ಸಭಾಭವನದಲ್ಲಿ ತಾಲೂಕಾಡಳಿತದ ವತಿಯಿಂದ ವೀರ ರಾಣಿ ಕಿತ್ತೂರು ಚೆನ್ನಮ್ಮ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ತಹಸೀಲ್ದಾರ್ ಧನಂಜಯ್ ಎಂ, ಎಸ್.ಎಸ್ ಬಿಚ್ಚಾಲಿ, ಸಮಾಜದ ಮುಖಂಡರಾದ ಎಸ್.ವ್ಹಿ ಪಾಟೀಲ, ಮಂಜುನಾಥ್ ಇಟಗಿ, ನಾಗರಾಜ್ ಹೊಂಬಳಗಟ್ಟಿ, ಆರ್.ಎಲ್ ಪಾಟೀಲ್, ಮಂಜುನಾಥ್ ಮುಧೋಳ್, ಮಂಜುಳ್ ಇಟಗಿ, ಬಸವರಾಜ್ ದೇಸಾಯಿ, ನಾಗರಾಜ್ ಮುರಡಿ, ಶಿವರಾಜ್ ಅಸುಂಡಿ, ಶಿವಾನಂದ್ ಕಮತರ್ ಮುಂತಾದವರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka